ದಿನಾಂಕ 02.09.2014 ರಂದು ನಡೆದ 13ನೇ ಪ್ರಶಿಕ್ಷಣ ಪರಿಷತ್ತಿನ ಸಭೆಯ ನಡಾವಳಿ.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತಿನ ೧೩ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಜೂನ್ ದಿನಾಂಕ 02.09.2014 ರಂದು ಮಂಗಳವಾರ ಪೂರ್ವಾಹ್ನ ೧೧.೩೦ ಗಂಟೆಗೆ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

ಹಾಜರಿದ್ದವರು:

| | | |
|---|---|---|
| ೧. | ಪ್ರೊ. ಶ್ರೀನಿವಾಸ ವರಖೇಡಿ, ಮಾನ್ಯ ಕುಲಪತಿಗಳು (ಪ್ರ) | ಅಧ್ಯಕ್ಷರು |
| ೨. | ವಿದ್ವಾನ್ ಚಂದ್ರಶೇಖರಯ್ಯ, ರಾಮನಗರ | ಸದಸ್ಯರು |
| ೩. | ವಿದ್ವಾನ್ ಶ್ರೀನಿವಾಸಮೂರ್ತಿ, ಮೈಸೂರು | ಸದಸ್ಯರು |
| ೪. | ಡಾ. ಸಿ. ಪಾಲಯ್ಯ, ಚಿತ್ರದುರ್ಗ | ಸದಸ್ಯರು |
| ೫. | ಡಾ. ಬಿ.ಎಸ್. ಮಹದೇವಯ್ಯ, ರಾಣೆಬೆನ್ನೂರು | ಸದಸ್ಯರು |
| ೬. | ಡಾ. ಪದ್ಮಾಶೇಖರ್, ಮೈಸೂರು | ಸದಸ್ಯರು |
| ೭. | ವಿದ್ವಾನ್ ಶ್ರೀಧರಶಾಸ್ತ್ರಿ ಇನಾಮದಾರ್, ಧಾರವಾಡ | ಸದಸ್ಯರು |
| ೮. | ಡಾ. ವೀರನಾರಾಯಣ ಎನ್.ಕೆ. ಪಾಂಡುರಂಗಿ, ಡೀನ್, ವೇದಾಂತ ನಿಕಾಯ | ಸದಸ್ಯರು |
| ೯. | ಪ್ರೊ. ವಿ. ಗಿರೀಶ್‌ಚಂದ್ರ, ಡೀನ್, ಭಾಷಾ ನಿಕಾಯ | ಸದಸ್ಯರು |
| ೧೦. | ವಿದ್ವಾನ್ ಗಜಾನನ ಲಕ್ಷ್ಮೀನಾರಾಯಣ ಭಟ್ಟ, ಉಮ್ಮಚಗಿ | ಸದಸ್ಯರು |
| ೧೧. | ಡಾ. ಎಮ್. ಕೆ. ಶ್ರೀಧರ್, ಕುಲಸಚಿವರು | ಸದಸ್ಯ ಕಾರ್ಯದರ್ಶಿ |

ಗೈರುಹಾಜರಿ:

| | | |
|---|---|---|
| ೧. | ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | ಅಪರ ಮುಖ್ಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. | ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೬. | ಪ್ರೊ. ಬಿ. ಮಹಾದೇವನ್, ಬೆಂಗಳೂರು | ಸದಸ್ಯರು |
| ೭. | ಡಾ. ಭಗವಂತ ಲಕ್ಷ್ಮಣ ನಡೋಣಿ, ಧಾರವಾಡ | ಸದಸ್ಯರು |
| ೮. | ಡಾ. ಭಾಷ್ಯಂಸ್ವಾಮಿ, ಮೈಸೂರು | ಸದಸ್ಯರು |
| ೯. | ವಿದ್ವಾನ್ ರಾಮಚಂದ್ರ ನಾ. ಭಟ್ಟ, ಉಮ್ಮಚಗಿ | ಸದಸ್ಯರು |
| ೧೦. | ವಿದ್ವಾನ್ ನರಸಿಂಹ ಭಟ್, ಸೋಂದಾ | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

**ವಿಷಯ 1:** ಪ್ರಶಿಕ್ಷಣ ಪರಿಷತ್ ಹನ್ನೆರಡನೇ ಸಭೆಯ ಅನುಪಾಲನಾ ವರದಿ.

**ಟಿಪ್ಪಣಿ:** ದಿನಾಂಕ: 05.06.2014ರಂದು ನಡೆದ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತಿನ ಹನ್ನೆರಡನೆಯ ಸಭೆಯಲ್ಲಿ ಚರ್ಚಿತವಾದ ವಿಷಯ ಸಂಖ್ಯೆ 1, ರಿಂದ 18ಕ್ಕೆ ಸಂಬಂಧಿಸಿದಂತೆ ಕ್ರಮವಹಿಸಲಾಗಿದೆ.

**ನಿರ್ಣಯ:** ಸಭೆಯು ಅನುಪಾಲನಾ ವಿವರಗಳನ್ನು ಪರಿಶೀಲಿಸಿ ಅನುಮೋದಿಸಿತು.

**ವಿಷಯ 2:** ಎಂ.ಫಿಲ್-ವಿಶಿಷ್ಟಾಚಾರ್ಯ ತರಗತಿಯ ವಿದ್ಯಾರ್ಥಿವೇತನವನ್ನು ಹೆಚ್ಚಿಸುವ ಬಗೆಗೆ

**ಟಿಪ್ಪಣಿ:** ವಿಶ್ವವಿದ್ಯಾಲಯವು 2012-13ನೇ ಸಾಲಿನಿಂದ ಎಂ.ಫಿಲ್-ವಿಶಿಷ್ಟಾಚಾರ್ಯ ತರಗತಿಗಳನ್ನು ಪ್ರಾರಂಭಿಸಿದೆ. ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ 16.06.2014ರಂದು 5ನೇ ಪ್ರಶಾಸನ ಸಮಿತಿಯ ನಿರ್ಣಯದಂತೆ 1000/- ರೂ.ಗಳನ್ನು ನಿಗದಿಪಡಿಸಲಾಗಿತ್ತು. 2014-15ನೇ ಸಾಲಿನಿಂದ ವಿದ್ಯಾರ್ಥಿಗಳಿಗೆ ಅನುಕೂಲ ದೃಷ್ಟಿಯಿಂದ ಈ ಮೊತ್ತವನ್ನು 2000ರೂಗಳಿಗೆ ಹೆಚ್ಚಿಸಬಹುದಾಗಿದೆ. ಎಂ.ಫಿಲ್-ವಿಶಿಷ್ಟಾಚಾರ್ಯ ತರಗತಿಗಳಲ್ಲಿ ಪ್ರತಿ ವರ್ಷವೂ ಗರಿಷ್ಠ 20 ವಿದ್ಯಾರ್ಥಿಗಳಿದ್ದು ಆಗಸ್ಟ್ ತಿಂಗಳಿಂದ ಮೇ ತಿಂಗಳವರೆಗೆ ಒಟ್ಟು 10 ತಿಂಗಳ ಕಾಲದ ಒಟ್ಟು ಮೊತ್ತವು 4,00,000 (ನಾಲ್ಕು ಲಕ್ಷ ರೂಪಾಯಿಗಳು ಮಾತ್ರ) ಆಗುತ್ತದೆ. ವಿದ್ಯಾರ್ಥಿಗಳ ಪ್ರೋತ್ಸಾಹ ಧನವನ್ನು ಹೆಚ್ಚಿಸಲು ಸಭೆಗೆ ಮಂಡಿಸಿದೆ.

**ನಿರ್ಣಯ:** **ಗರಿಷ್ಠ 20 ವಿದ್ಯಾರ್ಥಿಗಳಿಗೆ ಪ್ರತಿಮಾಸ 2000.00 ರೂಗಳನ್ನು ನೀಡಲು ಒಪ್ಪಿಗೆ ನೀಡಲಾಯಿತು.**

**ವಿಷಯ 3:** ಪಿಎಚ್.ಡಿ-ವಿದ್ಯಾವಾರಿಧಿ ತರಗತಿಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ನೀಡುವ ಬಗೆಗೆ

**ಟಿಪ್ಪಣಿ:** 2014-15ನೇ ಸಾಲಿನಿಂದ 2013-14ನೇ ಸಾಲಿನ ವಿದ್ಯಾರ್ಥಿಗಳಿಗೂ ಅನ್ವಯವಾಗುವಂತೆ ಪಿಎಚ್.ಡಿ-ವಿದ್ಯಾವಾರಿಧಿ ತರಗತಿಗಳ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನವನ್ನು ನೀಡಬಹುದಾಗಿದೆ. ಪಿಎಚ್.ಡಿ-ವಿದ್ಯಾವಾರಿಧಿ ತರಗತಿಗಳಲ್ಲಿ ಒಟ್ಟು 2013-14 ಹಾಗೂ 2014-15 ಸಾಲಿನ ಒಟ್ಟು ಪೂರ್ಣಕಾಲಿಕ ವಿದ್ಯಾರ್ಥಿಗಳು ಅಂದಾಜು 40 ಇರಲಿದ್ದು, ಒಟ್ಟು ವಿದ್ಯಾರ್ಥಿಗಳಿಗೆ ಪ್ರತಿಮಾಸದಂತೆ ತಲಾ 3000ದಂತೆ 2014-15ನೇ ಸಾಲಿನಲ್ಲಿ ಒಂದು ವರ್ಷದ ಮೊತ್ತವು 14,40,000/- ಆಗಲಿದೆ ಹಾಗೂ ಮುಂದಿನ ಸಾಲಿಗೆ 20 ಪೂರ್ಣಕಾಲಿಕ ವಿದ್ಯಾರ್ಥಿಗಳಿಗೆ 7,20,000/- ರೂ.ಗಳಾಗಲಿದೆ. ಒಟ್ಟು ಮೂರುವರ್ಷಗಳಿಗೆ 21,60,000/-(ಇಪ್ಪತ್ತೊಂದು ಲಕ್ಷದ ಅರವತ್ತು ಸಾವಿರ ರೂಪಾಯಿಗಳು ಮಾತ್ರ) ಪ್ರೋತ್ಸಾಹ ಧನದ ಮೊತ್ತವಾಗಲಿದೆ. ಸಭೆಯಲ್ಲಿ ಪ್ರೋತ್ಸಾಹ ಧನವನ್ನು ನೀಡಲು ಅನುಮತಿ ಕೋರಿದೆ.

**ನಿರ್ಣಯ:** **ಗರಿಷ್ಠ 15 ಪೂರ್ಣಕಾಲಿಕ ಪಿಎಚ್.ಡಿ ವಿದ್ಯಾರ್ಥಿಗಳಿಗೆ ಯೋಗ್ಯತೆಯ ಆಧಾರದ ಮೇಲೆ ಪ್ರತಿಮಾಸ 5000.00 ರೂ.ಗಳನ್ನು ನೀಡಲು ಒಪ್ಪಿಗೆ ನೀಡಲಾಯಿತು.**

**ವಿಷಯ 4 :** ವಿವಿಧ ನಿಕಾಯಗಳಲ್ಲಿ ಸರ್ಟಿಫಿಕೇಟ್ ಹಾಗೂ ಡಿಪ್ಲೋಮಾ ಕೋರ್ಸ್‌ಗಳನ್ನು ಪ್ರಾರಂಭಿಸುವ ಬಗೆಗೆ

**ಟಿಪ್ಪಣಿ:** 2014-15ನೇ ಸಾಲಿನಿಂದ ಭಾಷಾ, ಶಾಸ್ತ್ರ, ವೇದಾಂತ ಹಾಗೂ ವೇದ ನಿಕಾಯಗಳಲ್ಲಿ ನೂತನವಾಗಿ ಸರ್ಟಿಫಿಕೇಟ್ ಹಾಗೂ ಡಿಪ್ಲೋಮಾ ಕೋರ್ಸ್‌ಗಳನ್ನು ಸಂಸ್ಕೃತಶಾಸ್ತ್ರಗ್ರಂಥಗಳ ಅಧ್ಯಯನ ಹಾಗೂ ಪರಿಚಯಕ್ಕಾಗಿ ಪ್ರಾರಂಭಿಸಬಹುದಾಗಿದೆ. ಈ ಸಂಬಂಧ ಸಭೆಯ ಅನುಮತಿಯನ್ನು ಕೋರಿದೆ. (ವಿವರಗಳನ್ನು ಲಗತ್ತಿಸಿದೆ-ಸಂಲಗ್ನ 1)

**ನಿರ್ಣಯ:** **2014-15ನೇ ಸಾಲಿನಿಂದ ಭಾಷಾ, ಶಾಸ್ತ್ರ, ವೇದಾಂತ ಹಾಗೂ ವೇದ ನಿಕಾಯಗಳಲ್ಲಿ ನೂತನವಾಗಿ ಸರ್ಟಿಫಿಕೇಟ್ ಹಾಗೂ ಡಿಪ್ಲೋಮಾ ಕೋರ್ಸ್‌ಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಯಿತು. ಯೋಗ ವಿಷಯಕ್ಕೆ ಸಂಬಂಧಿಸಿದಂತೆ ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಸರ್ಟಿಫಿಕೇಟ್ ಹಾಗೂ ಡಿಪ್ಲೋಮಾ ಕೋರ್ಸ್‌ಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಯಿತು.**

ವಿಷಯ 5 : ಭಾಷಾನಿಕಾಯದ ಅಡಿಯಲ್ಲಿ ಪಿ.ಜಿ. ಡಿಪ್ಲೋಮಾ ಇನ್ ಹಸ್ತಪ್ರತಿಶಾಸ್ತ್ರವನ್ನು ಪ್ರಾರಂಭಿಸಿರುವ ಬಗೆಗೆ

ಟಿಪ್ಪಣಿ: 2014–15ನೇ ಸಾಲಿನಿಂದ ಪಿ.ಜಿ. ಡಿಪ್ಲೋಮಾ ಇನ್ ಹಸ್ತಪ್ರತಿಶಾಸ್ತ್ರವನ್ನು ಪ್ರಾರಂಭಿಸಲಾಗಿದೆ. ಕೋರ್ಸಿನ ಶುಲ್ಕಗಳನ್ನು ಈ ಕೆಳಗಿನಂತೆ ನಿಗದಿ ಪಡಿಸಲಾಗಿದೆ.

- ನೋಂದಣಿ ಶುಲ್ಕ : 100/–
- ಟ್ಯೂಷನ್ ಶುಲ್ಕ : 1500/–
- ಪರೀಕ್ಷಾ ಶುಲ್ಕ : 800/–
- ಅಂಕಪಟ್ಟಿ ಶುಲ್ಕ : 100/–
- ಒಟ್ಟು : 2500/–(ಎರಡು ಸಾವಿರದ ಐದುನೂರು ರೂಪಾಯಿಗಳು ಮಾತ್ರ)

ಅಧ್ಯಯನ ಮಂಡಳಿಯ ಸಭೆಯನ್ನು ದಿನಾಂಕ: 02.07.2014ರಂದು ನಡೆಸಿ ಪಾಠ್ಯಕ್ರಮವನ್ನು ಸಿದ್ಧಪಡಿಸಲಾಗಿದೆ. ಈ ಸಂಬಂಧ ಅನುಮೋದನೆಯನ್ನು ಮಾನ್ಯರಲ್ಲಿ ಕೋರಿದೆ. (ವಿವರಗಳನ್ನು ಲಗತ್ತಿಸಿದೆ–ಸಂಲಗ್ನ 2)

ನಿರ್ಣಯ: **ಸ್ನಾತಕೋತ್ತರ ಡಿಪ್ಲೋಮಾ ಹಸ್ತಪ್ರತಿಶಾಸ್ತ್ರ(ಪಿ.ಜಿ. ಡಿಪ್ಲೋಮಾ ಇನ್ ಮ್ಯಾನ್ಯುಸ್ಕ್ರಿಪ್ಟಾಲಜಿ)ವನ್ನು ಪ್ರಾರಂಭಿಸಲು ಹಾಗೂ ನಿಗದಿಪಡಿಸಿದ ಶುಲ್ಕವನ್ನು ಸಭೆಯು ಅನುಮೋದಿಸಿತು. ಹಸ್ತಪ್ರತಿಶಾಸ್ತ್ರಕ್ಕೆ ಸಂಬಂಧಿಸಿದ ಸಂಶೋಧನ ಕೇಂದ್ರಗಳಲ್ಲಿ ಮತ್ತು ಮಹಾವಿದ್ಯಾಲಯಗಳಲ್ಲಿ ಕೋರ್ಸನ್ನು ಆರಂಭಿಸಲು ಅನುಮತಿಯನ್ನು ನೀಡಲಾಯಿತು.**

ವಿಷಯ 6 : ಭಾಷಾನಿಕಾಯದ ಅಡಿಯಲ್ಲಿ ಭಾರತೀಯ ಇತಿಹಾಸ ಐಚ್ಛಿಕ ಪತ್ರಿಕೆಯನ್ನು ಪ್ರಾರಂಭಿಸಿರುವ ಬಗೆಗೆ

ಟಿಪ್ಪಣಿ : 2014–15ನೇ ಸಾಲಿನಿಂದ ಅನ್ವಯವಾಗುವಂತೆ ಐಚ್ಛಿಕ ಪತ್ರಿಕೆಯಾಗಿ 'ಭಾರತೀಯ ಇತಿಹಾಸ'ವೆಂಬ ವಿಷಯವನ್ನು ಅಳವಡಿಸಲಾಗಿದೆ. ಈ ಸಂಬಂಧ ದಿನಾಂಕ: 18.06.2014ರಂದು ನಡೆದ ಅಧ್ಯಯನ ಮಂಡಳಿಯಲ್ಲಿ ಸಿದ್ಧಪಡಿಸಲಾಗಿದೆ. ಈ ಸಂಬಂಧ ಸಭೆಯಲ್ಲಿ ಅನುಮೋದನೆಯನ್ನು ಕೋರಿದೆ(ವಿವರಗಳನ್ನು ಲಗತ್ತಿಸಿದೆ–ಸಂಲಗ್ನ 3).

ನಿರ್ಣಯ: **2014–15ನೇ ಸಾಲಿನಿಂದ ಅನ್ವಯವಾಗುವಂತೆ ಐಚ್ಛಿಕ ಪತ್ರಿಕೆಯಾಗಿ 'ಭಾರತೀಯ ಇತಿಹಾಸ'ವೆಂಬ ವಿಷಯವನ್ನು ಬಿ.ಎ–ವಿದ್ವನ್ಮಧ್ಯಮಾ ತರಗತಿಗಳಲ್ಲಿ ಅಳವಡಿಸಲು ಸಭೆಯು ಘಟನೋತ್ತರ ಅನುಮೋದನೆಯನ್ನು ನೀಡಿತು.**

ವಿಷಯ 7 : ಭಾಷಾನಿಕಾಯದ ಅಡಿಯಲ್ಲಿ 'ಸಂಸ್ಕೃತ ಸಂಗಣಕ' ಐಚ್ಛಿಕ ಪತ್ರಿಕೆಯನ್ನು ಪ್ರಾರಂಭಿಸಿರುವ ಬಗೆಗೆ

ಟಿಪ್ಪಣಿ: 2014–15ನೇ ಸಾಲಿನಿಂದ ಅನ್ವಯವಾಗುವಂತೆ ಬಿಎ ತರಗತಿಗಳಲ್ಲಿ ಐಚ್ಛಿಕ ಪತ್ರಿಕೆಯಾಗಿ 'ಸಂಗಣಕ ಸಂಸ್ಕೃತ'ವೆಂಬ ವಿಷಯವನ್ನು ಅಳವಡಿಸಲಾಗಿದೆ. ಈ ಸಂಬಂಧ ದಿನಾಂಕ: 04.06.2014ರಂದು ನಡೆದ ಅಧ್ಯಯನ ಮಂಡಳಿಯಲ್ಲಿ ಸಿದ್ಧಪಡಿಸಲಾಗಿದೆ. ಈ ಸಂಬಂಧ ಸಭೆಯಲ್ಲಿ ಅನುಮೋದನೆಯನ್ನು ಕೋರಿದೆ. (ವಿವರಗಳನ್ನು ಲಗತ್ತಿಸಿದೆ–ಸಂಲಗ್ನ 4).

ನಿರ್ಣಯ: **2014–15ನೇ ಸಾಲಿನಿಂದ ಅನ್ವಯವಾಗುವಂತೆ ಐಚ್ಛಿಕ ಪತ್ರಿಕೆಯಾಗಿ 'ಸಂಸ್ಕೃತ ಸಂಗಣಕ'ವೆಂಬ ವಿಷಯವನ್ನು ಬಿ.ಎ–ವಿದ್ವನ್ಮಧ್ಯಮಾ ತರಗತಿಗಳಲ್ಲಿ ಅಳವಡಿಸಲು ಸಭೆಯು ಘಟನೋತ್ತರ ಅನುಮೋದನೆಯನ್ನು ನೀಡಿತು. ಪತ್ರಿಕೆಯ ಹೆಸರನ್ನು 'ಸಂಗಣಕಶಾಸ್ತ್ರ' ಎಂಬುದಾಗಿ ಬದಲಿಸಲು ನಿರ್ಣಯಿಸಲಾಯಿತು**

ವಿಷಯ 8 : ಭಾಷಾನಿಕಾಯದ ಅಡಿಯಲ್ಲಿ 'ಸಂಸ್ಕೃತ ಸಾಹಿತ್ಯ' ವಿಷಯವನ್ನು ಪ್ರಾರಂಭಿಸಿರುವ ಬಗೆಗೆ

ಟಿಪ್ಪಣಿ: 2014–15ನೇ ಸಾಲಿನಿಂದ ಅನ್ವಯವಾಗುವಂತೆ ಐಚ್ಛಿಕ ವಿಷಯವಾಗಿ **'ಸಂಸ್ಕೃತ ಸಾಹಿತ್ಯ'**ವೆಂಬ ವಿಷಯವನ್ನು ಅಳವಡಿಸಲಾಗಿದೆ. ಈ ಸಂಬಂಧ ದಿನಾಂಕ: 05.06.2014ರಂದು ನಡೆದ ಅಧ್ಯಯನ ಮಂಡಳಿಯಲ್ಲಿ ಸಿದ್ಧಪಡಿಸಲಾಗಿದೆ. ಈ ಸಂಬಂಧ ಸಭೆಯಲ್ಲಿ ಅನುಮೋದನೆಯನ್ನು ಕೋರಿದೆ(ವಿವರಗಳನ್ನು ಲಗತ್ತಿಸಿದೆ– ಸಂಲಗ್ನ 5).

ನಿರ್ಣಯ: 2014–15ನೇ ಸಾಲಿನಿಂದ ಅನ್ವಯವಾಗುವಂತೆ ಐಚ್ಛಿಕ ಪತ್ರಿಕೆಯಾಗಿ **'ಸಂಸ್ಕೃತ ಸಾಹಿತ್ಯ'** ವೆಂಬ ವಿಷಯವನ್ನು ಬಿ.ಎ–ವಿದ್ವನ್ಮಧ್ಯಮಾ ಹಾಗೂ ಎಂ.ಎ–ವಿದ್ವದುತ್ತಮಾ ತರಗತಿಗಳಲ್ಲಿ ಅಳವಡಿಸಲು ಸಭೆಯು ಘಟನೋತ್ತರ ಅನುಮೋದನೆಯನ್ನು ನೀಡಿತು.

ವಿಷಯ 9 : ವಿಶ್ವವಿದ್ಯಾಲಯದ ಸಿಬ್ಬಂದಿಗಳಿಗೆ ಕೋರ್ಸ್‌ವರ್ಕ್ ನಡೆಸುವ ಬಗೆಗೆ

ಟಿಪ್ಪಣಿ : ವಿಶ್ವವಿದ್ಯಾಲಯದ ಈ ಕೆಳಕಂಡ ಐದು ಸಿಬ್ಬಂದಿಗಳಿಗೆ ಪಿಎಚ್.ಡಿ-ವಿದ್ಯಾವಾರಿಧಿ ತರಗತಿಯಲ್ಲಿ ನೋಂದಣಿ ಮಾಡಿಸಿರುತ್ತಾರೆ.

- ವಿದ್ವಾನ್ ಎಂ.ಎಸ್.ನಾರಾಯಣಸ್ವಾಮಿ (ಯೋಜನಾ ಸಹಾಯಕರು)
- ವಿದ್ವಾನ್ ತಿಮ್ಮಣ್ಣ ಆರ್. (ಯೋಜನಾ ಸಹಾಯಕರು)
- ವಿದುಷೀ ತೇಜಸ್ವಿನಿ ಡಿ. (ಯೋಜನಾ ಸಹಾಯಕರು)
- ವಿದ್ವಾನ್ ವಿ.ಎಚ್. ಲೋಕೇಶ್ (ಹಿರಿಯ ಸಹಾಯಕರು)

ಇವರು ವಿಶ್ವವಿದ್ಯಾಲಯದ ಪೂರ್ಣಕಾಲಿಕ ಸಿಬ್ಬಂದಿಗಳಾಗಿದ್ದು, ಯು.ಜಿ.ಸಿ ನಿಯಮಗಳ ಪ್ರಕಾರ, ಇವರ ವೃತ್ತಿಪರ ಅಭಿವೃದ್ಧಿಯ ದೃಷ್ಟಿಯಿಂದ ಪಿಎಚ್.ಡಿಯನ್ನು ಮಾಡಬಹುದಾಗಿದೆ. ಯು.ಜಿ.ಸಿ ನಿಯಮಗಳ ಪ್ರಕಾರ ಆರು ತಿಂಗಳ ಕೋರ್ಸ್‌ವರ್ಕ್ ಕಡ್ಡಾಯವಾದ ಕಾರಣ ವಾರದ ಕೊನೆಯ ಎರಡು ದಿನಗಳಲ್ಲಿ ಕಾರ್ಯಾಲಯ ಅವಧಿಯನ್ನು ಹೊರತುಪಡಿಸಿ ಬೇರೆ ಅವಧಿಯಲ್ಲಿ ಕೋರ್ಸ್‌ವರ್ಕ್‌ಗೆ ಹಾಜರಾಗಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ನಿಯಮದಂತೆ ಪ್ರತಿಸಪ್ತಾಹ 9 ಗಂಟೆಗಳಂತೆ ಕೋರ್ಸ್‌ವರ್ಕ್ ಮಾಡಬಹುದಾಗಿದೆ. ಆ ದಿನಗಳಲ್ಲಿ ಸಿಬ್ಬಂದಿಗಳು ಅವಧಿಪೂರ್ವದಲ್ಲಿ ಆಗಮಿಸಿ ವಿಶ್ವವಿದ್ಯಾಲಯದ ಕರ್ತವ್ಯಗಳನ್ನು ನಿರ್ವಹಿಸುವಂತೆ ಷರತ್ತಿಗೆ ಒಳಪಡಿಸಬಹುದಾಗಿದೆ. ಈ ಸಂಬಂಧ ಸಭೆಯ ಅನುಮೋದನೆಯನ್ನು ಕೋರಿದೆ.

ನಿರ್ಣಯ: **ವಿಶ್ವವಿದ್ಯಾಲಯದ ಕಾರ್ಯ ಸಮಯದ ಹೊರಗೆ ಆರು ತಿಂಗಳ ಅವಧಿಯ ಪಿಎಚ್.ಡಿ ಕೋರ್ಸ್‌ವರ್ಕ್‌ನಲ್ಲಿ ಭಾಗವಹಿಸಲು ಒಪ್ಪಿಗೆ ನೀಡಲಾಯಿತು.**

ವಿಷಯ 10 : **'ಶ್ರೀ ಅರಬಿಂದೋ ಕಪಾಲಿ ಶಾಸ್ತ್ರಿ ವೇದಸಂಸ್ಕೃತಿ ಸಂಸ್ಥೆ'ಗೆ ಸಂಶೋಧನಾ ಕೇಂದ್ರವೆಂದು ಮಾನ್ಯತೆ ನೀಡುವ ಕುರಿತು.**

ಟಿಪ್ಪಣಿ : 'ಶ್ರೀ ಅರಬಿಂದೊ ಕಪಾಲಿಶಾಸ್ತ್ರಿ ವೇದಸಂಸ್ಕೃತಿ ಸಂಸ್ಥೆ'ಯು ಸಂಶೋಧನೆ ಮತ್ತು ಗ್ರಂಥಪ್ರಕಾಶನದಲ್ಲಿ ನೈಪುಣ್ಯವನ್ನು ಗಳಿಸಿದೆ. ಈ ಕೇಂದ್ರವು ಪಾಠೋಪಕರಣಗಳು, ಸಂಗಣಕ ವಿಭಾಗ, ಸುಸಜ್ಜಿತ ಗ್ರಂಥಾಲಯ, ಪರಾಮರ್ಶನ ಗ್ರಂಥಗಳು, ನಿಯತಕಾಲಿಕೆಗಳು, ವಿದ್ವತ್‌ಪತ್ರಿಕೆಗಳು ಹಾಗೂ ಮತ್ತಿತರ ಆಧುನಿಕ ಸೌಲಭ್ಯಗಳನ್ನು ಹೊಂದಿದ್ದು ಸಂಶೋಧನೆಗೆ ಪೂರಕವಾಗಿದೆ. ಪ್ರಾಚೀನ ಗುರುಕುಲ ಪದ್ಧತಿಯಲ್ಲಿ ವೇದ ವೇದಾಂಗಗಳನ್ನು ಅಧ್ಯಯನ ಮಾಡಿದ ವಿದ್ವಾಂಸರ ಸಹಕಾರದಿಂದ ವೇದಶಿಕ್ಷಣವನ್ನು ಪ್ರಾಚೀನ ಪದ್ಧತಿಯಂತೆ ನೀಡಲಾಗುತ್ತಿದೆ. ಈ ಸಂಸ್ಥೆಯ ದಾಖಲಾತಿಗಳನ್ನು ದಿನಾಂಕ: 01.08.2014ರಂದು ತಪಾಸಣಾ ಸಮಿತಿಯು ಖುದ್ದು ಭೇಟಿ ನೀಡಿ ನಿಯಮಾನುಸಾರ ಪರಿಶೀಲಿಸಿದೆ. ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ. (ವಿವರಗಳನ್ನು ಲಗತ್ತಿಸಿದೆ-ಸಂಲಗ್ನ 5)

ನಿರ್ಣಯ: **ಶ್ರೀ ಅರಬಿಂದೋ ಕಪಾಲಿ ಶಾಸ್ತ್ರಿ ವೇದಸಂಸ್ಕೃತಿ ಸಂಸ್ಥೆ'ಗೆ ಸಂಶೋಧನಾ ಕೇಂದ್ರವೆಂದು ಮಾನ್ಯತೆ ನೀಡಿದ ಸಂಬಂಧ ಸಭೆಯಲ್ಲಿ ಘಟನೋತ್ತರ ಅನುಮತಿಯನ್ನು ನೀಡಲಾಯಿತು.**

ವಿಷಯ 11: **ಅಧ್ಯಯನಾಂಗಕ್ಕೆ ಸಂಬಂಧಿಸಿದ ದರಪಟ್ಟಿಯನ್ನು ಅನುಮೋದಿಸುವ ಬಗೆಗೆ**

ಟಿಪ್ಪಣಿ : ಅಧ್ಯಯನಾಂಗಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ದರಪಟ್ಟಿಯನ್ನು ಈ ಕೆಳಕಂಡಂತೆ ಸಿದ್ಧಪಡಿಸಲಾಗಿದೆ.

**ಪ್ರಶಾಸನ ಪರಿಷತ್ತಿನ ಸಭೆಯಲ್ಲಿಡಲು ಪ್ರಸ್ತಾವಿಸಲಾಗಿದೆ.**

| ಕ್ರ.ಸಂ | ವಿಷಯ | ರೂ. |
|---|---|---|
| | ಸಾಮಾನ್ಯ ಉಪನ್ಯಾಸಗಳು (including lectures delivered for M.Phil Ph.D. coursework) | 500 |
| | ಆಹ್ವಾನಿತ ವಿಶೇಷೋಪನ್ಯಾಸಗಳು | 1000 |
| | ಸ್ಥಾಪನಾ ದಿನದ ಉಪನ್ಯಾಸ (ಅಂತಾರಾಷ್ಟ್ರಿಯ ಖ್ಯಾತಿಯ ವಿದ್ವಾಂಸರು ಮಾತ್ರ, ಭಾಷಣದ ಮುದ್ರಿತ ಭಾಷಣದೊಂದಿಗೆ) | 10,000 |

| | | |
|---|---|---|
| | ಸಾಮಾನ್ಯ ಸಭಾ ಭತ್ಯೆ | 500 |
| | ಡಿ ಲಿಟ್/ಪಿಹೆಚ್. ಡಿ. ಪ್ರಬಂಧ ಮೌಲ್ಯಮಾಪನ | 1000 |
| | ಡಿ ಲಿಟ್/ಪಿ.ಹೆಚ್ ಡಿ. ಮೌಖಿಕ | 1000 |
| | ಎಮ್. ಫಿಲ್. ಪ್ರಬಂಧ ಮೌಲ್ಯಮಾಪನ | 500 |
| | ಎಮ್ ಫಿಲ್ ಮೌಖಿಕ (ಒಂದು ದಿನಕ್ಕೆ) | 500 (ನ್ಯೂನತಮ)<br>1000 (ಗರಿಷ್ಠತಮ) |
| | Migration fee | 500 |
| | Character certificate | 200 |
| | Study certificate | 200 |
| | TC fee | 200 |
| | Enrollment fee | 200 |

**Already approved Fees for M.Phil**

| ಕ್ರ.ಸಂ | ವಿಷಯ | ರೂ. |
|---|---|---|
| | Application Fee | 300 |
| | Application + Entrance Exam Fee | 500 |
| | Admission & Registration Fee | 1500 |
| | Course work Fee | 1500 |
| | Course work Exam fee (including certificate fee 500) | 500 |
| | Thesis evaluation fee | 500 |
| | Library fee | 250 |
| | Revaluation fee (per paper course work) | 500 |
| | Convocation Fee | 500 |

**Fees for Ph. D**

| ಕ್ರ.ಸಂ | ವಿಷಯ | ರೂ. |
|---|---|---|
| | Application Fee | 300 |
| | Application + Entrance Exam Fee | 500 |
| | Enrollment Fee | 5000 |
| | Course work fee | 3000 |
| | Course work Exam fee(including certificate fee 500) | 1000 |
| | Revaluation fee (per paper course work) | 1000 |
| | Post coursework Yearly tuitions fee | 5000 |
| | Library fee per year Rs | 500 |
| | Ph. D Thesis Submission & examination fee | 8000 |
| | Convocation fee | 1000 |
| | Permission fee for publication of thesis | 2500 |

ಮೇಲ್ಕಂಡ ದರಪಟ್ಟಿಯನ್ನು ಅನುಮೋದಿಸಲು ಸಭೆಯಲ್ಲಿ ಕೋರಿದೆ.

ನಿರ್ಣಯ: ವಿಶ್ವವಿದ್ಯಾಲಯದ ಅಧ್ಯಯನಾಂಗದ ದರಪಟ್ಟಿಗೆ ಅನುಮತಿಯನ್ನು ನೀಡಲಾಯಿತು. ಅದೇ ಊರಿನ ವಿದ್ವಾಂಸರಿಗೆ ಕೇವಲ ಪ್ರಯಾಣ ಹಾಗೂ ಸಭಾ ಭತ್ಯೆಯನ್ನು ನೀಡಲು ನಿರ್ಣಯಿಸಲಾಯಿತು. ಹೊರ ಊರಿನಿಂದ ಬಂದ ವಿದ್ವಾಂಸರಿಗೆ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆಗಳನ್ನು ನೀಡಿ ಸಭಾಭತ್ಯೆಯನ್ನು ಬೇರೆ ರಶೀದಿಯಲ್ಲಿ ತೋರಿಸಿಕೊಡಬೇಕೆಂದು ನಿರ್ಣಯಿಸಲಾಯಿತು.

ಕೆಳಕಂಡಂತೆ ಪರೀಕ್ಷಾ ದರಪಟ್ಟಿಯನ್ನು ಅಂಗೀಕರಿಸಲಾಯಿತು.

**2014–15ನೇ ಸಾಲಿನ ಪಾಠಶಾಲೆಗಳಿಗೆ ಸಂಬಂಧಿಸಿದಂತೆ ಪರಿಷ್ಕರಿಸಿದ ದರ ವಿವರ**

| ಕ್ರ.ಸಂ | ವಿವರ | ಹಿಂದಿನದರ | ಪರಿಷ್ಕರಿಸಿದ ದರ |
|---|---|---|---|
| 1 | ಮೌಲ್ಯಮಾಪನ = ಪ್ರಥಮಾ | 2 | 3 ರೂ |
| 2 | ವೇದ.ವಾಚಾ ಒಬ್ಬರಿಗೆವಿದ್ಯಾರ್ಥಿಗೆ ಎಲ್ಲಾ ಪತ್ರಿಕೆಗೆ ಸೇರಿ | – | 200 ರೂ ಕನಿಷ್ಠ 5ವಿದ್ಯಾರ್ಥಿಗಳವರಗೆ ನಂತರ ಒಬ್ಬರಿಗೆ 10 ರೂ) |
| 3 | ಮೌಲ್ಯಮಾಪನ = ಕಾವ್ಯ | 3 | 5 ರೂ |
| 4 | ವೇದ.ವಾಚಾ ಒಬ್ಬರಿಗೆವಿದ್ಯಾರ್ಥಿ ಎಲ್ಲಾ ಪತ್ರಿಕೆಗೆ ಸೇರಿ | – | 200 ರೂ ಕನಿಷ್ಠ 5 ವಿದ್ಯಾರ್ಥಿಗಳವರಗೆ ನಂತರ ಒಬ್ಬರಿಗೆ 10ರೂ) |
| 5 | ಮೌಲ್ಯಮಾಪನ = ಸಾಹಿತ್ಯ | 4 | 8 ರೂ |
| 6 | ವೇದ ಮೂಲ ವಾಚಾ ಒಬ್ಬರಿಗೆ ಎಲ್ಲಾ ಪತ್ರಿಕೆಗೆ ಸೇರಿ | – | 40ರೂನಿಂದ200ರ ವರೆಗೆ ನಂತರ ಒಬ್ಬರಿಗೆ 10ರೂ |
| 7 | ಮೌಲ್ಯಮಾಪನ ಕಾರ್ಯಕ್ಕೆ | 100 | ಶಿಕ್ಷಕರಿಗೆ ಡಿ.ಎ (ವೇತನಕ್ಕೆ ತಕ್ಕಂತೆ) |
| 8 | ಪ್ರಶ್ನ ಪತ್ರಿಕೆ ತಯಾರಿಕೆ | | ಒಂದು ಪ್ರಶ್ನೆ ಪತ್ರಿಕೆಗೆ 200 |
| 9 | ಪ್ರಶ್ನ ಪತ್ರಿಕೆ ಪರಿಶೀಲನ ಸಭೆಗೆ | | ಒಂದು ಪ್ರಶ್ನ ಪತ್ರಿಕೆಗೆ 50 ರೂ (ಟಿ ಎ/ಡಿ.ಎ ಹೋರಗಿನವರಿಗೆ) |
| 10 | ಹೊಸ ಪರೀಕ್ಷಾ ಕೇಂದ್ರಕ್ಕೆ | 300 | 500 |
| 11 | ಹೊಸ ಶಾಲಾ ಸಂಕೇತಕ್ಕೆ | 300 | 300 |
| 12 | ಪಾಠಶಾಲೆಗಳ ಮಾನ್ಯತೆ ಶುಲ್ಕ | 1000 | 1000 |
| 13 | ಕ್ರೋಢೀಕೃತ ಅಂಕ ಪಟ್ಟಿಗೆ | 500 | 500 |
| 14 | ತಿದ್ದುಪಡಿ ಅಂಕಪಟ್ಟಿಗೆ | 500 | 500 |
| 15 | ಮರು ಮೌಲ್ಯಮಾಪನ | 500 | 600 |
| 16 | ನಕಲು ಅಂಕಪಟ್ಟಿಗೆ | 500 | 500 |
| 17 | ಮರು ಎಣಿಕೆ | 500 | 500 |
| 18 | ಪರೀಕ್ಷಾ ಶುಲ್ಕ ಪ್ರಥಮಾ | 70 | 90 |
| 19 | ಕಾವ್ಯ | 90 | 150 |
| 20 | ಸಾಹಿತ್ಯ | 150 | 250 |

**2014–15ನೇ ಸಾಲಿನ ಪರೀಕ್ಷಾ ಕೇಂದ್ರದ ನಿರ್ವಹಣೆಗಾಗಿ ಸಾದಿಲ್ವಾರು**

| ಕ್ರ. ಸಂ. | ವಿವರ | ಮೊತ್ತ |
|---|---|---|
| 1 | ಮುಖ್ಯ ಅಧೀಕ್ಷಕರ ಸಂಭಾವನೆ ಒಂದು ದಿನಕ್ಕೆ | 100 |
| 2 | ಕೊಠಡಿ ಮೇಲ್ವಿಚಾರಕರಿಗೆ ಸಂಭಾವನೆ ಒಂದು ಅವಧಿಗೆ | 50 |
| 3 | ಸಹಾಯಕರಿಗೆ ಸಂಭಾವನೆ ಒಂದು ದಿನಕ್ಕೆ | 50 |
| 4 | ಡಿ.ಗ್ರೂಪ್, ನೀರು ಕೂಡುವವರಿಗೆ ಸಂಭಾವನೆ ಒಂದು ದಿನಕ್ಕೆ | 40 |
| 5 | ಒಬ್ಬ ವಿದ್ಯಾರ್ಥಿಗೆ ಸಿ.ಜಿ. | 5 |

**2014–15ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ಕಾಲೇಜುಗಳಿಗೆ ಸಂಬಂಧಿಸಿದಂತೆ ಪರಿಷ್ಕರಿಸಿದ ದರ ವಿವರ**

| ಕ್ರ.ಸಂ | ವಿವರ | ಹಿಂದಿನ | ಪರಿಷ್ಕರಿಸಿದ ದರ |
|---|---|---|---|

| | | ದರ | |
|---|---|---|---|
| 1 | ಮೌಲ್ಯಮಾಪನ ಬಿ.ಎ | 5 | 8 ರೂ |
| | ವೇದ.ವಾಚಾ ಒಬ್ಬರಿಗೆವಿದ್ಯಾರ್ಥಿಗೆ ಎಲ್ಲಾ ಪತ್ರಿಕೆಗೆ ಸೇರಿ | 50 | 200 ರೂ ಕನಿಷ್ಠ 5 ವಿದ್ಯಾರ್ಥಿಗಳ ವರೆಗೆ ನಂತರ ಒಬ್ಬರಿಗೆ 20 ರೂ |
| 2 | ಮೌಲ್ಯಮಾಪನ ಎಂ.ಎ | 6 | 10 ರೂ |
| | ವೇದ.ವಾಚಾ ಒಬ್ಬರಿಗೆವಿದ್ಯಾರ್ಥಿಗೆ ಎಲ್ಲಾ ಪತ್ರಿಕೆಗೆ ಸೇರಿ | 50 | 200 ರೂ ಕನಿಷ್ಠ 5 ವಿದ್ಯಾರ್ಥಿಗಳ ವರೆಗೆ ನಂತರ ಒಬ್ಬರಿಗೆ 20 ರೂ |
| 3 | ಪ್ರಶ್ನ ಪತ್ರಿಕೆ ತಯಾರಿಕೆ ಬಿ.ಎ | 275 | 250 ಒಂದು ಪ್ರಶ್ನೆ ಪತ್ರಿಕೆಗೆ |
| 4 | ಪ್ರಶ್ನ ಪತ್ರಿಕೆ ತಯಾರಿಕೆ ಎಂ.ಎ | 350 | 300 ಒಂದು ಪ್ರಶ್ನೆ ಪತ್ರಿಕೆಗೆ |
| 5 | ಪ್ರಶ್ನ ಪತ್ರಿಕೆ ಪರಿಶೀಲನ ಸಭೆಗೆ ಆಗಮಿಸುವವರಿಗೆ | | ಒಂದು ಪ್ರಶ್ನೆ ಪತ್ರಿಕೆಗೆ 50 ರೂ (ಟಿ ಎ/ಡಿ.ಎ ಹೊರಗಿನವರಿಗೆ) |
| 6 | ಹೊಸ ಪರೀಕ್ಷಾ ಕೇಂದ್ರಕ್ಕೆ | – | 1000 |
| 7 | ಹೊಸ ಕಾಲೇಜು ಸಂಕೇತಕ್ಕೆ | – | 1000 |
| 8 | ಕಾಲೇಜು ಮಾನ್ಯತೆ ಶುಲ್ಕ | 5000 | 6000 |
| 9 | ಕ್ರೋಢೀಕೃತ ಅಂಕ ಪಟ್ಟಿಗೆ | 500 | 500 |
| 10 | ವಲಸೆ ಪ್ರಮಾಣ ಪತ್ರಕ್ಕೆ | 500 | 500 |
| 11 | ವ್ಯಾಸಂಗ ಪ್ರಮಾಣಪತ್ರಕ್ಕೆ | 500 | 500 |
| 12 | ತಿದ್ದುಪಡಿ ಅಂಕಪಟ್ಟಿಗೆ | 500 | 500 |
| 13 | ಮರು ಮೌಲ್ಯ ಮಾಪನ | 1200 | 1200 |
| 14 | ನಕಲು ಅಂಕಪಟ್ಟಿಗೆ | 500 | 500 |
| 15 | ಮರು ಎಣಿಕೆ | 500 | 500 |
| 16 | ಪದವಿ ಪ್ರಮಾಣಪತ್ರ | 500 | 500 ( ಒಂದು ವರ್ಷಕ್ಕೆ 50 ದಂಡ) |
| 17 | ಅಂಕ ಪಟ್ಟಿ ನೈಜತೆ ಪರಿಶೀಲನೆಗೆ | 500 | 500 |
| 18 | ಪರೀಕ್ಷಾ ಶುಲ್ಕ ಬಿ.ಎ | 170 | 350 |
| 19 | ಪರೀಕ್ಷಾ ಶುಲ್ಕ ಎಂ.ಎ | 170 | 500 |
| 20 | ಪರೀಕ್ಷಾ ಶುಲ್ಕ ಖಾಸಗಿ ಬಿ.ಎ/ಎಂ.ಎ | 1200 | 1200 |
| 21 | ಅನುತ್ತೀರ್ಣ ಪ್ರತಿ ವಿಷಯಕ್ಕೆ ಶುಲ್ಕ | 100 | 200 |

**2014–15ನೇ ಸಾಲಿನ ಪರೀಕ್ಷಾ ಕೇಂದ್ರದ ನಿರ್ವಹಣೆಗಾಗಿ ಸಾದಿಲ್ವಾರು**

| ಕ್ರ. ಸಂ. | ವಿವರ | ಮೊತ್ತ |
|---|---|---|
| 1 | ಮುಖ್ಯ ಅಧೀಕ್ಷಕರ ಸಂಭಾವನೆ ಒಂದು ದಿನಕ್ಕೆ | 100 |
| 2 | ಕೊಠಡಿ ಮೇಲ್ವಿಚಾರಕರಿಗೆ ಸಂಭಾವನೆ ಒಂದು ಅವಧಿಗೆ | 50 |
| 3 | ಸಹಾಯಕರಿಗೆ ಸಂಭಾವನೆ ಒಂದು ದಿನಕ್ಕೆ | 50 |
| 4 | ಡಿ.ಗ್ರೂಪ್ ಹಾಗೂ ನೀರು ಕೊಡುವವರಿಗೆ ಸಂಭಾವನೆ ಒಂದು ದಿನಕ್ಕೆ | 40 |
| 5 | ಒಬ್ಬ ವಿದ್ಯಾರ್ಥಿಗೆ ಸಿ.ಜಿ. | 5 |

2014–15ನೇ ಸಾಲಿನ **ಜ್ಯೋತಿಷ್ಯ ಶುಲ್ಕದ ವಿವರ**

| ಕ್ರ. ಸಂ | ವಿವರ | ಶುಲ್ಕ |
|---|---|---|
| 1 | ಸರ್ಟಿಫಿಕೇಟ್ ಕೋರ್ಸ್ ಆರು ತಿಂಗಳು | 1500 |
| 2 | ಡಿಪ್ಲೋಮಾ ಕೋರ್ಸ್ ಒಂದು ವರ್ಷ | 2000 |
| 3 | ಜ್ಯೋತಿಷ್ಯ ಕೇಂದ್ರ ಮಾನ್ಯತೆ | 5000 |

*ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ 50% ವಿನಾಯಿತಿ ಎಲ್ಲ ಮೇಲ್ಕಂಡ ದರದಲ್ಲಿ ರಿಯಾಯಿತಿ ಇರುತ್ತದೆ.

**ವಿಷಯ 12 :** ವಿದ್ವನ್ಮಧ್ಯಮಾ ಹಾಗೂ ವಿದ್ವದುತ್ತಮಾ ತರಗತಿಗಳ ಪಠ್ಯಪುಸ್ತಕವನ್ನು ಸಿದ್ಧಪಡಿಸುವ ಬಗೆಗೆ

ಟಿಪ್ಪಣಿ : 2014–15ನೇ ಸಾಲಿನಿಂದ ವಿದ್ವನ್ಮಧ್ಯಮಾ ಹಾಗೂ ವಿದ್ವದುತ್ತಮಾ ತರಗತಿಗಳಿಗೆ ನೂತನ ಪಾಠ್ಯಕ್ರಮಗಳನ್ನು ರಚಿಸಲಾಗಿದೆ. ಪಾಠ್ಯಗಳನ್ನು ಪುಸ್ತಕ ರೂಪದಲ್ಲಿ ಸಿದ್ಧಪಡಿಸಬೇಕಿರುತ್ತದೆ. ಈ ಸಂಬಂಧ ಟೆಂಡರ್ ಕರೆಯಲು ಪ್ರಿಂಟ್ ಮಾಡಿಸಲು ಮತ್ತು ಸ್ಕ್ಯಾನ್ ಮಾಡಿ ಜಾಲತಾಣದಲ್ಲಿ ಪ್ರಕಟಿಸಲು ಸಭೆಯಲ್ಲಿ ಅನುಮೋದನೆಯನ್ನು ಕೋರಿದೆ.

ನಿರ್ಣಯ: **2014–15ನೇ ಸಾಲಿನಿಂದ ವಿದ್ವನ್ಮಧ್ಯಮಾ ಹಾಗೂ ವಿದ್ವದುತ್ತಮಾ ತರಗತಿಗಳ ಪಾಠ್ಯಗಳನ್ನು ಪುಸ್ತಕ ರೂಪದಲ್ಲಿ ಸಿದ್ಧಪಡಿಸಲು, ಈ ಸಂಬಂಧ ಟೆಂಡರ್ ಕರೆಯಲು ಪ್ರಿಂಟ್ ಮಾಡಿಸಲು ಮತ್ತು ಸ್ಕ್ಯಾನ್ ಮಾಡಿ ಜಾಲತಾಣದಲ್ಲಿ ಪ್ರಕಟಿಸಲು ಸಭೆಯಲ್ಲಿ ಅನುಮೋದನೆಯನ್ನು ನೀಡಲಾಯಿತು.**

ವಿಷಯ 13 : **ಯೋಜನಾ ಸಹಾಯಕರನ್ನು ವಿವಿಧ ನಿಕಾಯಗಳಿಗೆ ಯೋಜಿಸುವ ಬಗೆಗೆ**

ಟಿಪ್ಪಣಿ : ವಿಶ್ವವಿದ್ಯಾಲಯದ ಶೈಕ್ಷಣಿಕ ಸಿಬ್ಬಂದಿಗಳಾದ ಯೋಜನಾ ಸಹಾಯಕರನ್ನು ವಿವಿಧ ನಿಕಾಯಗಳಿಗೆ ಯೋಜಿಸಬಹುದಾಗಿದೆ. ಇವರ ಶೈಕ್ಷಣಿಕ ಹಾಗೂ ಅಭಿವೃದ್ಧಿಯ ದೃಷ್ಟಿಯಿಂದ ಹಾಗೂ ವಿಶ್ವವಿದ್ಯಾಲಯದ ವಿವಿಧ ನಿಕಾಯಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳಲ್ಲಿ ಕಾರ್ಯವನ್ನು ನಿರ್ವಹಿಸಲು ಯೋಜನೆಯು ಸಹಾಯಕವಾಗುತ್ತದೆ. ಈ ಕೆಳಕಂಡಂತೆ ಈಗಾಗಲೇ ನಿಯುಕ್ತರಾದ ಯೋಜನಾಸಹಾಯಕ ಸಿಬ್ಬಂದಿಯ ವಿದ್ಯಾರ್ಹತೆಗೆ ಅನುಗುಣವಾಗಿ ವಿವಿಧ ನಿಕಾಯಗಳಲ್ಲಿ ನಿಯೋಜಿಸಿದೆ.

| | |
|---|---|
| ಭಾಷಾನಿಕಾಯ : | ವಿದ್ವಾನ್ ತಿಮ್ಮಣ್ಣ ಆರ್ |
| | ವಿದ್ವಾನ್ ನಾರಾಯಣಸ್ವಾಮಿ ಎಂ.ಎಸ್ |
| | ವಿದುಷೀ ಸಾವಿತ್ರೀ ಪೂಜಾರಿ |
| | ವಿದ್ವಾನ್ ರಾಜಶೇಖರ ಕೆ.ಕೆ. |
| ಶಾಸ್ತ್ರನಿಕಾಯ : | ವಿದ್ವಾನ್ ಉದಯನ ಹೆಗಡೆ |
| | ವಿದ್ವಾನ್ ರಾಘವ ಕೆ.ಎಲ್. |
| | ವಿದುಷೀ ಜ್ಯೋತಿ ಹೆಚ್.ಪಿ |
| ವೇದಾಂತನಿಕಾಯ: | ವಿದುಷೀ ಶ್ರುತಿ ಎಚ್.ಕೆ |
| | ವಿದುಷೀ ಶಕುಂತಲಾ ಭಟ್ |
| | ವಿದುಷೀ ತೇಜಸ್ವಿನೀ ಡಿ. |

ಮೇಲ್ಕಂಡ ಅಂಶಕ್ಕೆ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಈ ವಿಷಯದ ಬಗೆಗೆ ವಿವರವಾಗಿ ಚರ್ಚಿಸಿ ವಿದ್ವಾನ್ ಉದಯನ ಹೆಗಡೆ ಇವರನ್ನು ಭಾಷಾ ನಿಕಾಯದಲ್ಲಿ ಹಾಗೂ ವಿದ್ವಾನ್ ತಿಮ್ಮಣ್ಣ ಆರ್. ಇವರನ್ನು ಶಾಸ್ತ್ರ ನಿಕಾಯದಲ್ಲಿ ಸೇರಿಸುವಂತೆ ಸೂಚಿಸಲಾಯಿತು. ಯೋಜನಾ ಸಹಾಯಕರನ್ನು ಆಯಾ ನಿಕಾಯಗಳ ಡೀನ್‌ರ ನಿರ್ದೇಶಾನುಸಾರವಾಗಿ ಸಂಶೋಧನಾ ಕಾರ್ಯಗಳಲ್ಲಿ ಮತ್ತಿತರ ಕಾರ್ಯಗಳಲ್ಲಿ ತೊಡಗಿಸುವಂತೆ ನಿರ್ಣಯಿಸಲಾಯಿತು.**

ವಿಷಯ 14: **ಡಿ.ಲಿಟ್–ವಿದ್ಯಾವಾಚಸ್ಪತಿ ಪದವಿಯ ನಿಯಮಾವಳಿಯ ಬಗೆಗೆ**

ಟಿಪ್ಪಣಿ: 2014–15ನೇ ಸಾಲಿನಿಂದ ಅನ್ವಯವಾಗುವಂತೆ ಡಿ.ಲಿಟ್–ವಿದ್ಯಾವಾಚಸ್ಪತಿ ಪದವಿಯ ಸಂಪೂರ್ಣ ರೂಪುರೇಷೆಯನ್ನು ಸಿದ್ಧಪಡಿಸಿ ಸಭೆಯ ಪರಿಶೀಲನೆಗಾಗಿ ಸಲ್ಲಿಸಿದೆ. (ಸಂಲಗ್ನ:7)

ನಿರ್ಣಯ: **ಡಿ.ಲಿಟ್–ವಿದ್ಯಾವಾಚಸ್ಪತಿ ಪದವಿಯ ಸಂಪೂರ್ಣ ರೂಪುರೇಷೆಗೆ ಸಭೆಯಲ್ಲಿ ಅನುಮತಿಯನ್ನು ನೀಡಲಾಯಿತು.**

ವಿಷಯ 15: **ವಿಶ್ವವಿದ್ಯಾಲಯದ ಪ್ರವೇಶ ನಿಯಮಾವಳಿಯ ಬಗೆಗೆ**

ಟಿಪ್ಪಣಿ: 2014–15ನೇ ಸಾಲಿನಿಂದ ಅನ್ವಯವಾಗುವಂತೆ ಪ್ರವೇಶ ನಿಯಮಾವಳಿಯನ್ನು ಸಿದ್ಧಪಡಿಸಿ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ. (ಸಂಲಗ್ನ:8)

ನಿರ್ಣಯ: ಉದ್ಯೋಗಿ ಅಭ್ಯರ್ಥಿಗಳು ಬಾಹ್ಯವಿದ್ಯಾರ್ಥಿಯಾಗಿ ಯಾವುದೇ ವಿಶ್ವವಿದ್ಯಾಲಯದ ಕೋರ್ಸ್‌ನಲ್ಲಿ ಪ್ರವೇಶವನ್ನು ಪಡೆಯಬಹುದು. ಉದ್ಯೋಗಿ ಅಭ್ಯರ್ಥಿಗಳು ಪರ ಊರಿನ ಮಹಾವಿದ್ಯಾಲಯದಲ್ಲಿ ಪೂರ್ಣಕಾಲಿಕ ವಿದ್ಯಾರ್ಥಿಯಾಗಿ ಪ್ರವೇಶವನ್ನು ಪಡೆಯಬಾರದು ಎಂದು ನಿರ್ಣಯಿಸಲಾಯಿತು.

**ವಿಷಯ 16: ಹೊಸದಾಗಿ ಮಾನ್ಯತೆ ನೀಡಿರುವ ಜ್ಯೋತಿಷ್ಯ ಅಧ್ಯಯನ ಕೇಂದ್ರಗಳ ಬಗೆಗೆ.**

**ಟಿಪ್ಪಣಿ :** ದಿನಾಂಕ : 05.06.2014ರಂದು ನಡೆದ 12ನೇ ಪ್ರಶಿಕ್ಷಣ ಪರಿಷತ್ತಿನ ಸಭೆಯಲ್ಲಿ 28 ಸಂಸ್ಥೆಗಳಿಗೆ ಮಾನ್ಯತೆಯನ್ನು ನೀಡಿದ ಸಂಬಂಧ ಅನುಮೋದನೆಯನ್ನು ನೀಡಲಾಗಿತ್ತು. ಬಾಕಿ ಉಳಿದ 14 ಜ್ಯೋತಿಷ್ಯ ಅಧ್ಯಯನ ಕೇಂದ್ರಗಳಿಗೆ ಮಾನ್ಯತೆಯನ್ನು ನೀಡಬೇಕಿರುತ್ತದೆ. ಈ ಕೆಳಕಂಡ ಸಂಸ್ಥೆಗಳಿಗೆ ಸಂಯೋಜಕರ ಉಪಸ್ಥಿತಿಯಲ್ಲಿ ತ್ರಿಸದಸ್ಯರ ಸಮಿತಿಯು ಭೇಟಿ ನೀಡಿ, ಪರಿಶೀಲಿಸಿ ಧನಾತ್ಮಕ ವರದಿಯು ನೀಡಿದ ನಂತರ ಮಾನ್ಯತೆಯನ್ನು ನೀಡಲಾಗಿದೆ. ಘಟನೋತ್ತರ ಅನುಮೋದನೆಗಾಗಿ ಸಭೆಯಲ್ಲಿ ಮಂಡಿಸಿದೆ.

| ಕ್ರ.ಸಂ | ಸಂಸ್ಥೆ | ವಿಳಾಸ |
|---|---|---|
| 1 | ಪರಾಶರ ಆಸ್ಟ್ರೋಲಾಜಿ ಟ್ರೇನಿಂಗ್ ಆಂಡ್ ರೀಸರ್ಚ್ ಸೆಂಟರ್(ರಿ) | 16 ಇ, ಮೊದಲನೆ ಮಹಡಿ, 14ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು–40, ದೂ: 8861444666 |
| 2 | COSMIC VISION | #21, 1st Floor,Rajarajeshwari Complex, 8th Main, Near last bus stop, Padmanabhanagar, Bangalore – 70<br>Phone No - 9448087304 |
| 3 | ಶ್ರೀ ಗುರು ಇನ್ಸ್ಟಿಟ್ಯೂಟ್ ಆಫ್ ಅಸ್ಟ್ರೋಲಜಿ | No 2207, 1st Floor, 4th A Cross, 3rd Main Road, Opp. Government College, Hampinagar, Vijayanagar 2nd Stage, Bangalore -40,<br>ph:8880948887 |
| 4 | ಶೈವ ವಾಣಿ ಸೇವಾ ಪ್ರತಿಷ್ಠಾನಮ್ (ರಿ) | ಗುರುಗಳ ಬೀದಿ, ಕೀಲಾರ, ಕೆರೆಗೋಡು ಹೋಬಳಿ, ಮಂಡ್ಯ ತಾಲ್ಲೂಕು, ಫೋನ್ ನಂ– 9740177553 |
| 5 | ಅಖಿಲ ಕರ್ನಾಟಕ ಜ್ಯೋತಿರ್ವಿಜ್ಞಾನ ವಿದ್ಯಾ ಸಂಸ್ಥೆ | ಎಲ್.ಐ.ಜಿ.96, ಅಶೋಕನಗರ, ಬೆಳಗಾವಿ– 590016<br>8123083345,<br>7353503637 |
| 6 | ವಿದ್ಯಾರಣ್ಯ ಜ್ಯೋತಿಷ್ಯ ಅಧ್ಯಯನ ಮತ್ತು ಸಂಶೋಧನ ಕೇಂದ್ರ | ಶ್ರೀ ಶಂಕರಾಚಾರ್ಯ ಸಂಸ್ಕೃತ ಮಹಾಪಾಠಶಾಲೆ, ಧಾರವಾಡ<br>9741667795 |
| 7 | ಶ್ರೀ ಗುರುಶಾಂತೇಶ್ವರ ಜನ ಕಲ್ಯಾಣ ಪ್ರತಿಷ್ಠಾನ (ರಿ) | ಹಿರೇಮಠ, ಹುಕ್ಕೇರಿ–591309<br>ಜಿ. ಬೆಳಗಾಂವ.<br>ಫೊ–08333–265433 |
| 8 | ಶ್ರೀ ಸ್ವಾಮಿ ವಿವೇಕಾನಂದ ಭಾರತೀಯ ವಿದ್ಯಾ ಸಂಸ್ಥೆ. | ಠಾಣಾ ಹತ್ತರಗಿ, ಪು.ನಿ.ಕೇಂದ್ರ (ಆನಂದಪುರ) ಅಂಚೆ– ಠಾಣಾ ಹತ್ತರಗಿ, ತಾ–ಹುಕ್ಕೇರಿ, ಜಿ–ಬೆಳಗಾಂವ.<br>ಫೊ–08333–376543 |
| 9 | ಶ್ರೀ.ಡಾ. ಮರುಳಸಿದ್ಧಪಂಡಿತಾರಾಧ್ಯ ಶಿವಾಚಾರ್ಯ ಜ್ಯೋತಿಷ್ಯ ವೇದಪಾಠಶಾಲೆ | ಬಡವಿದ್ಯಾರ್ಥಿಗಳ ಪ್ರಸಾದ ನಿಲಯದ ಸಮಿತಿ, ಹಿರೇಮಠ ವಿದ್ಯಾಪೀಠ, ಕೂಡ್ಲಗಿ–583135<br>ಬಳ್ಳಾರಿ ಜಿಲ್ಲೆ.<br>ಫೊ–08391–220370 |
| 10 | ಶ್ರೀ ಕೊಡ್ಲಿ ಚನ್ನಬಸವೇಶ್ವರ ವಿದ್ಯಾಪೀಠ. | ಕೂಡ್ಲಿಮಠ, ತಾಳಗುಪ್ಪ –577430<br>ಫೊ–ತಾಳಗುಪ್ಪ, ತಾ–ಸಾಗರ ಜಿ॥, ಶಿವಮೊಗ್ಗ |
| 11 | INSTITUTE OF INTEGRATED POSITIVE ASTROLOGY | #247, 43rd Cross. 9th Main, Jayanagar 5th Block, Bangalore-560041<br>Phone- 9742911599 |
| 12 | Gopavijaya Astro Research & Study Center. | #39, Bhoovarah, 4th Cross<br>Vinayaka Nagara, BSK 1ST Stage, |

| | | |
|---|---|---|
| | | Bangalore-560050, Phone- 9008002434 |
| 13 | ಮಂತ್ರೇಶ್ವರ ಜ್ಯೋತಿಷ್ಯ ಮಾಹಾವಿದ್ಯಾಲಯ | ನಂ-30, ನಂದಿ, ಕುವೆಂಪು ರೋಡ್, ಚಿಕ್ಕಲ್ಲಂದ್ರ, ಬೆಂಗಳೂರು-560018 ಫೂ-9342920913 |
| 14 | ಶ್ರೀ ಕಾಲಭೈರವೇಶ್ವರ ವೇದಾಗಮ ಸಂಸ್ಕೃತ ಸ್ನಾತಕ ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ | ಶ್ರೀ ಆದಿಚುಂಚನಗಿರಿ ಕ್ಷೇತ್ರ-571811, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ ಫೋ-9448511102 |

ನಿರ್ಣಯ: ಮಾನ್ಯತೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ವಿಷಯ 17 : ಜ್ಯೋತಿಷ್ಯ ಸರ್ಟಿಫಿಕೇಟ್ ಹಾಗೂ ಡಿಪ್ಲೋಮಾ ತರಗತಿಗಳ ಸಂಸ್ಕೃತ ಭಾಷಾ ಪತ್ರಿಕೆಯ ಪಠ್ಯಪುಸ್ತಕವನ್ನು ಸಿದ್ಧಪಡಿಸುವ ಬಗೆಗೆ**

ಟಿಪ್ಪಣಿ : 2014-15ನೇ ಸಾಲಿನಿಂದ ಸರ್ಟಿಫಿಕೇಟ್ ಹಾಗೂ ಡಿಪ್ಲೋಮಾ ತರಗತಿಗಳಿಗೆ ನೂತನ ಪಾಠ್ಯಕ್ರಮಗಳನ್ನು ರಚಿಸಲಾಗಿದೆ. ಸಂಸ್ಕೃತ ಪತ್ರಿಕೆಗಳಿಗೆ ಸಂಬಂಧಪಟ್ಟ ಪಾಠ್ಯಗಳನ್ನು ಪುಸ್ತಕ ರೂಪದಲ್ಲಿ ಸಿದ್ಧಪಡಿಸಬೇಕಿರುತ್ತದೆ. ಈ ಸಂಬಂಧ ಅಧ್ಯಯನ ಮಂಡಳಿಯನ್ನು ರಚಿಸಿ ರೂಪುರೇಷೆಗಳನ್ನು ಸಿದ್ಧಪಡಿಸಿದೆ. ಈ ಸಂಬಂಧ ಸಭೆಯಲ್ಲಿ ಅನುಮೋದನೆಯನ್ನು ಕೋರಿದೆ.

ನಿರ್ಣಯ: ಸಭೆಯು ಘಟನೋತ್ತರವಾಗಿ ಅನುಮೋದಿಸಿತು.

**ವಿಷಯ 18: ಹಿರೇಮಠ, ಹುಕ್ಕೇರಿ ಸಂಸ್ಕೃತ ಕಾಲೇಜಿಗೆ ಅನುಮತಿ**

ಟಿಪ್ಪಣಿ: ಶ್ರೀ ಗುರು ಶಾಂತೇಶ್ವರ ಜನಕಲ್ಯಾಣ ಪ್ರತಿಷ್ಠಾನ (ರಿ) ಬೆಳಗಾವಿ ಇವರು 2014-15ನೇ ಸಾಲಿನಲ್ಲಿ ಅದ್ವೈತ ವೇದಾಂತ, ಶಕ್ತಿ ವಿಶಿಷ್ಟಾದ್ವೈತ ವೇದಾಂತ, ಅಲಂಕಾರಶಾಸ್ತ್ರ ಹಾಗೂ ಜ್ಯೋತಿಷಶಾಸ್ತ್ರ ವಿದ್ವನ್ಮಧ್ಯಮಾ ಪ್ರಥಮ ವರ್ಷದ ತರಗತಿಗಳನ್ನು(ಸಂಸ್ಕೃತ )ಕಾಲೇಜನ್ನು ಪ್ರಾರಂಭಿಸಲು ಪ್ರಸ್ತಾವನೆಯನ್ನು ದಿನಾಂಕ: 28.08.2014 ರಂದು ಸಲ್ಲಿಸಿದ್ದರು. ಮಾನ್ಯ ಕುಲಪತಿಗಳ ಅನುಮೋದನೆಯಂತೆ ತ್ರಿಸದಸ್ಯ ಸಮಿತಿಯು ಪರಿಶೀಲಿಸಿ ಸಂಸ್ಕೃತ ಕಾಲೇಜನ್ನು ಪ್ರಾರಂಭಿಸಲು ಸೂಕ್ತವಾದ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಮಾಹಿತಿಗಳನ್ನು ನೀಡಿರುವುದರಿಂದ ಇವರಿಗೆ ಅನುಮತಿಯನ್ನು ನೀಡಬಹುದಾಗಿದೆ ಎಂದು ವರದಿ ನೀಡಿದೆ.

**ನಿರ್ಣಯ: ಬೆಳಗಾವಿ ವಲಯದಲ್ಲಿ ಸಂಸ್ಕೃತಾಧ್ಯಯನವನ್ನು ಉತ್ತರಿಸುವ ದೃಷ್ಟಿಯಿಂದ ಸಭೆಯು ಘಟನೋತ್ತರವಾಗಿ ಅನುಮೋದಿಸಿತು.**

**ವಿಷಯ 19: ಶ್ರಾವಣ ಮಾಸದಲ್ಲಿ ಸಂಸ್ಕೃತ ಮಾಸಾಚರಣೆ**

ಟಿಪ್ಪಣಿ: : ಶ್ರಾವಣ ಮಾಸವನ್ನು ಸಂಸ್ಕೃತ ಮಾಸವನ್ನಾಗಿ ಆಚರಿಸುವ ಪ್ರಕ್ರಿಯೆಗೆ ದಿನಾಂಕ: 11.08.2014ರಂದು ನ್ಯಾಷನಲ್ ಪದವಿ ಕಾಲೇಜು, ಜಯನಗರ. ಇಲ್ಲಿ ಚಾಲನೆ ನೀಡಲಾಯಿತು. ಈ ಸಂಸ್ಕೃತೋತ್ಸವದ ಅಂಗವಾಗಿ ಕರ್ನಾಟಕದ ಎಲ್ಲಾ ಸಂಸ್ಕೃತ ಕಾಲೇಜು, ಹಾಗೂ ಪಾಠಶಾಲೆಗಳಲ್ಲಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲು ಸೂಚಿಸಲಾಗಿದೆ. ಶ್ರೀ ಮನ್ಮಹಾರಾಜ ಸಂಸ್ಕೃತ ಕಾಲೇಜು ಮೈಸೂರು, ಇಲ್ಲಿ "ಪ್ರತಿಜ್ಞಾ ಕೌಟಿಲ್ಯಂ" ಎಂಬ ನಾಟಕವನ್ನು ವಿ.ಗಂಗಾಧರ ಭಟ್ ಅವರ ನಿರ್ದೇಶನದಲ್ಲಿ ದಿನಾಂಕ:23.08.14 ನಡೆಸಲಿದ್ದಾರೆ. ದಿನಾಂಕ: 17.08.14-07.09.2014 ರವರೆಗೆ ಶಾಸ್ತ್ರವಾರು ವಾಕ್ಯಾರ್ಥಗೋಷ್ಠಿಗಳನ್ನು ಆಯೋಜಿಸಲಾಗಿದೆ. ದಿನಾಂಕ: 05.09.14ರಿಂದ 09.09.14ರವರೆಗೆ ನಾಟಕೋತ್ಸವವನ್ನು ಕಸಂವಿಯು ಆಯೋಜಿಸಲಾಗಿದೆ. ಗಾಂಧಿಭವನದಲ್ಲಿ "ಗಾಂಧಿ ಸ್ಮೃತಿ- ಕವಿ ಸಂಗಮ" ಎಂಬ ಕಾರ್ಯಕ್ರಮದೊಂದಿಗೆ ಸಂಸ್ಕೃತೋತ್ಸವದ ಸಮಾರೋಪ ಸಮಾರಂಭವನ್ನು ದಿನಾಂಕ: 09.09.2014ರಂದು ಕಸಂವಿಯು ಹಮ್ಮಿಕೊಂಡಿದೆ. ಈ ವಿಷಯಗಳನ್ನು ಅವಗಾಹನೆಗೆ ಸಭೆಯಮಂಡಿಸಿದೆ.

ನಿರ್ಣಯ: ಕಾರ್ಯಕ್ರಮದ ಬಗ್ಗೆ ಸಭೆಯು ಸಂತೋಷವನ್ನು ವ್ಯಕ್ತಪಡಿಸಿ ಅನುಮೋದಿಸಿತು.

**ವಿಷಯ 20: ಕಾಲೇಜು ಅಧ್ಯಾಪಕರಿಗೆ ನೂತನ ಪಠ್ಯಕ್ರಮದ ಪುನಶ್ಚೇತನ ಕಾರ್ಯಕ್ರಮ**

ಟಿಪ್ಪಣಿ: ಕಾಲೇಜು ಅಧ್ಯಾಪಕರಿಗೆ ನೂತನ ಪಠ್ಯಕ್ರಮದ ಪುನಶ್ಚೇತನ ಕಾರ್ಯಕ್ರಮ ವನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಆಯೋಜಿಸಲು ನಿರ್ಧರಿಸಿದೆ.ಅದಕ್ಕೆ ತಗಲುವ ಅಂದಾಜು ವೆಚ್ಚದ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ . (ಸಂಲಗ್ನ 9)

| ಕ್ರ.ಸಂ | ಕಾರ್ಯಕ್ರಮದ ಪಟ್ಟಿ | ಮೊತ್ತ |
|---|---|---|
| 1 | ಸಾದಿಲ್ವಾರು ವೆಚ್ಚ(ಪೆನ್ನು, ನೋಟ್ ಬುಕ್, ಬ್ಯಾನರ್, ಪ್ರಮಾಣ ಪತ್ರ, ಆಹ್ವಾನ ಪತ್ರಿಕೆ, ಜೆರಾಕ್ಸ್, ಪೋಟೊ | 20,000/– |
| 2 | ಅಧ್ಯಾಪಕರಿಗೆ ಸಾರಿಗೆ ವೆಚ್ಚ(ವಿದ್ವನ್ಮಧ್ಯಮಾ ಹಾಗೂ ವಿದ್ವದುತ್ತಮಾ) | 2,00,000/– |
| 3 | ಶಿಬಿರ ಸಂಚಾಲಕರಿಗೆ ಗೌರವ ಸಂಭಾವನೆ | 6,000/– |
| 4 | ಗೌರವ ಅತಿಥಿ ಮತ್ತು ಬೋಧಕರಿಗೆ ಪ್ರಯಾಣ ಭತ್ಯೆ, ದಿನಭತ್ಯೆ ಹಾಗೂ ಗೌರವ ಸಂಭಾವನೆ | 40,000/– |
| | ಒಟ್ಟು ಮೊತ್ತ | 2,66,000/– |

ನಿರ್ಣಯ: ಒಪ್ಪಿಗೆ ನೀಡಲಾಯಿತು.

**ವಿಷಯ 21: ಶ್ರೀ ಮೇಧಾದಕ್ಷಿಣಾಮೂರ್ತಿ ಸವೇದ ಸಂಸ್ಕೃತ ಕಾಲೇಜು, ಗೋಕರ್ಣ ಇಲ್ಲಿ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ**

ಟಿಪ್ಪಣಿ: ಶ್ರೀ ಮೇಧಾ ದಕ್ಷಿಣಾಮೂರ್ತಿ ಸವೇದ ಸಂಸ್ಕೃತ ಕಾಲೇಜು, ಗೋಕರ್ಣ ಇಲ್ಲಿ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಆಯೋಜಿಸಲಾಗಿದೆ. ಈ ಕಾರ್ಯಕ್ರಮಕ್ಕಾಗಿ ಕಸಂವಿಯು ರೂ15,000/–ಗಳ ಧನ ಸಹಾಯವನ್ನು ನೀಡಿದೆ.

ನಿರ್ಣಯ: **ವಿಶ್ವವಿದ್ಯಾಲಯವು ನೀಡಿದ 15,000/ರೂ. ಸಹಾಯ ಧನಕ್ಕೆ ಸಭೆಯು ಘಟನೋತ್ತರ ಅನುಮತಿಯನ್ನು ನೀಡಿತು.**

**ವಿಷಯ 22: ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ನೀಡಿರುವ ಬಿ.ಎ ಆನರ್ಸ್ ಪದವಿಯ ಅನುಷ್ಠಾನದ ಬಗೆಗೆ**

ಟಿಪ್ಪಣಿ: ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ವಿಶ್ವವಿದ್ಯಾಲಯಗಳಿಗೆ ಬಿ.ಎ. ಆನರ್ಸ್ ಪದವಿಯನ್ನು ಪ್ರಾರಂಭಿಸಬಹುದಾಗಿ ತಿಳಿಸಿರುತ್ತದೆ. ಉನ್ನತ ಶಿಕ್ಷಣ ಪರಿಷತ್ತಿನ ಕಾರ್ಯದರ್ಶಿಗಳು ಈ ಸಂಬಂಧ ವಿಶ್ವವಿದ್ಯಾಲಯದ ಈ ಪದವಿಯ ಅನುಷ್ಠಾನಗೊಳಿಸುವ ಬಗೆಗೆ ಸಭೆಯಲ್ಲಿ ಸಲಹೆಯನ್ನು ಕೋರಿ ಪತ್ರ ಬರೆದಿದ್ದಾರೆ. ಅಭಿಪ್ರಾಯಕ್ಕಾಗಿ ಈ ವಿಷಯವನ್ನು ಮಂಡಿಸಲಾಗಿದೆ.

ನಿರ್ಣಯ: **ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ನೀಡಿರುವ ಬಿ.ಎ ಆನರ್ಸ್ ಪದವಿಯನ್ನು ಪ್ರಾರಂಭಿಸುವ ಹಾಗೂ ಇತರ ಸುಧಾರಣೆಗಳ ಬಗ್ಗೆ ಸಭೆಯು ಸಹಮತಿ ವ್ಯಕ್ತಪಡಿಸಿದೆ.**

**ವಿಷಯ 23: ವಿದ್ವನ್ಮಧ್ಯಮಾ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿ/ನಿಗಳಿಗೆ 'ವಿದ್ವತ್'(ಮಧ್ಯಮಾ) ಪದವಿಯನ್ನು ನೀಡುವ ಬಗೆಗೆ**

ಟಿಪ್ಪಣಿ: ಕರ್ನಾಟಕ ರಾಜ್ಯದಲ್ಲಿ ಅನಾದಿ ಕಾಲದಿಂದಲೂ ಪ್ರಚಲಿತವಾಗಿರುವ ವಿದ್ವನ್ಮಧ್ಯಮಾ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ 'ವಿದ್ವತ್'(ಮಧ್ಯಮಾ) ಪದವಿಯನ್ನು ನೀಡಬಹುದಾಗಿದೆ. ಈ ಸಂಬಂಧ ಅನುಮೋದನೆಗಾಗಿ ಪ್ರಸ್ತಾವವನ್ನು ಸಭೆಯಲ್ಲಿ ಸಲ್ಲಿಸಿದೆ.

ನಿರ್ಣಯ: **ವಿದ್ವನ್ಮಧ್ಯಮಾ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿ/ನಿಗಳಿಗೆ 'ವಿದ್ವತ್'(ಮಧ್ಯಮಾ) ಪದವಿಯನ್ನು ನೀಡುವ ಕುರಿತು ಗಹನವಾಗಿ ಚರ್ಚಿಸಿ ಮುಂದಿನ ಸಭೆಯಲ್ಲಿ ವಿಚಾರಾರ್ಥವಾಗಿ ಮುಂದೂಡಲಾಗಿದೆ. ಈ ವಿಷಯದಲ್ಲಿ ಎಲ್ಲ ಹಿರಿಯ ವಿದ್ವಾಂಸರುಗಳಿಗೆ ಹಾಗೂ ಪ್ರಾಚಾರ್ಯರುಗಳಿಗೆ ಪತ್ರ ಬರೆದು, ಬಿ.ಎ. ಪದವಿ ಸಂಸ್ಕೃತ ನಾಮಾಂತರಣದ ಬಗ್ಗೆ ಸಲಹೆಯನ್ನು ಪಡೆಯುವಂತೆ ಅಧ್ಯಯನಾಂಗ ನಿರ್ದೇಶಕರಿಗೆ ಸೂಚಿಸಲಾಯಿತು.**

ವಿಷಯ 24: ಬಿ.ಎ–ವಿದ್ವನ್ಮಧ್ಯಮಾ ತರಗತಿಗಳಲ್ಲಿನ ಭಾಷಾ ಪತ್ರಿಕೆಯ ಬಗೆಗೆ

ಟಿಪ್ಪಣಿ: ಬಿ.ಎ–ವಿದ್ವನ್ಮಧ್ಯಮಾ ತರಗತಿಗಳಲ್ಲಿ ಮೊದಲ ಭಾಷಾ ಪತ್ರಿಕೆಯ ಗುಂಪಿನಲ್ಲಿರುವ ಕನ್ನಡ, ಇಂಗ್ಲಿಷ್ ಹಾಗೂ ಸಂಸ್ಕೃತ– ಈ ಮೂರರಲ್ಲಿ ಸಂಸ್ಕೃತ ಭಾಷೆಯನ್ನು ಮೊದಲ ಪತ್ರಿಕೆಯಾಗಿ ಕಡ್ಡಾಯಗೊಳಿಸಿ, ಎರಡನೇ ಪತ್ರಿಕೆಯಲ್ಲಿ ಇಂಗ್ಲಿಷ್ ಅಥವಾ ಕನ್ನಡ ಭಾಷೆಯನ್ನು ಐಚ್ಛಿಕ ಪತ್ರಿಕೆಯಾಗಿ ಮಾಡಬಹುದಾಗಿದೆ. ಈ ಸಂಬಂಧ ಸಭೆಯ ನಿರ್ಣಯಕ್ಕಾಗಿ ಕೋರಿದೆ.

ನಿರ್ಣಯ: **ಮೇಲ್ಕಂಡ 24ನೇ ವಿಷಯದ ಬಗೆಗೆ ಚರ್ಚಿಸಿ ಬಿ.ಎ–ವಿದ್ವನ್ಮಧ್ಯಮಾ ತರಗತಿಗಳಲ್ಲಿನ ಭಾಷಾ ಪತ್ರಿಕೆಗಳಲ್ಲಿ ಯಾವುದೇ ಎರಡು ಭಾಷೆಗಳನ್ನು ಐಚ್ಛಿಕವಾಗಿ ಆಯ್ಕೆಮಾಡಿಕೊಳ್ಳಲು ಅವಕಾಶ ನೀಡಬೇಕೆಂದು ನಿರ್ಣಯಿಸಲಾಯಿತು.**

ವಿಷಯ 25: **ಹೊಸ ಪಾಠಶಾಲೆಗಳಿಗೆ ಅನುಮತಿ ನೀಡುವ ಬಗೆಗೆ**

ಟಿಪ್ಪಣಿ: 2014–15ನೇ ಸಾಲಿನಲ್ಲಿ ಗುಲ್ಬರ್ಗ ವಲಯದ ಹೊಸ ಪಾಠಶಾಲೆಗಳಾದ ಶ್ರೀ ಗುರುಚರಂತೇಶ್ವರ ವಿದ್ಯಾವರ್ಧಕ ಟ್ರಸ್ಟ್(ರಿ), ನಂದಿಪುರ, ಶಾಂತಿನಿಕೇತನ ಎಜುಕೇಶನ್ ಮತ್ತು ರೂರಲ್ ಡೆವಲಪ್‌ಮೆಂಟ್ ಸೊಸೈಟಿ(ರಿ) ಬಳ್ಳಾರಿ ಜಿ.ಕೆ.ಹೊಸೂರು, ಚೆನ್ನಾಲಿಂಗನಹಳ್ಳಿ, ಹಾಗೂ ಮೈಸೂರು ವಲಯದ ಶ್ರೀ ಮಹದೇಶ್ವರ ಸಂಸ್ಕೃತ ಪಾಠಶಾಲೆ, ಜಿ.ಕೆ.ಹೊಸೂರು, ಕೊಳ್ಳೇಗಾಲ ||ತಾ||, ಕಾವೇರಿಕನ್ಯಾ ಗುರುಕುಲ, ಬೊಮ್ಮೂರ, .ಶ್ರೀರಂಗಪಟ್ಟಣ, ಶ್ರೀ ಮುರುಘರಾಜೇಂದ್ರ ಸಂಸ್ಕೃತ ಪಾಠಶಾಲೆ, ಕಾಳನಹುಂಡಿ, ಚಾಮರಾಜನಗರ, ಶ್ರೀ ಮುರುಘರಾಜೇಂದ್ರ ಸಂಸ್ಕೃತ ಪಾಠಶಾಲೆ, ಮರಿಯಾಲ, ಚಾಮರಾಜನಗರ–ಈ ಆರು ಪಾಠಶಾಲೆಗಳಿಗೆ ಸಭೆಯ ಘಟನೋತ್ತರ ಅನುಮೋನೆಯನ್ನು ನಿರೀಕ್ಷಿಸಿ ಪಾಠಾಶಾಲೆಗಳನ್ನು ಹೊಸದಾಗಿ ಪ್ರಾರಂಭಿಸಲು ಅನುಮತಿಯನ್ನು ನೀಡಲಾಗಿದೆ. ಈ ಸಂಬಂಧ ಸಭೆಯಲ್ಲಿ ಮಂಡಿಸಿದೆ.

ನಿರ್ಣಯ: **ಮೇಲ್ಕಂಡ ಪಾಠಶಾಲೆಗಳಿಗೆ ಅನುಮತಿಯನ್ನು ಹಾಗೂ ಮಾನ್ಯತೆಯನ್ನು ನೀಡಲು ಸಭೆಯು ಘಟನೋತ್ತರವಾಗಿ ಅನುಮೋದಿಸಿತು.**

**ಅಧ್ಯಕ್ಷರ ಅನುಮತಿಯ ಮೇರೆಗೆ ಇತರ ವಿಷಯಗಳನ್ನು ಪ್ರಸ್ತಾವಿಸಲಾಯಿತು.**

ವಿಷಯ 26: **ಮಹಾವಿದ್ಯಾಲಯಗಳ ನಿರೀಕ್ಷಣಾ ತಂಡದ ರಚನೆ.**

ಟಿಪ್ಪಣಿ: ಸಂಬದ್ಧ ಎಲ್ಲ ಮಹಾವಿದ್ಯಾಲಯಗಳ ನಿರೀಕ್ಷಣೆಗಾಗಿ ಈ ಕೆಳಕಂಡಂತೆ ತಂಡಗಳನ್ನು ರಚಿಸಿ ಆ ತಂಡಗಳು ಡಿಸಂಬರ್ 2014ರ ಒಳಗೆ ನಿರೀಕ್ಷಣಾ ವರದಿಯನ್ನು ನೀಡುವಂತೆ ಕೋರಲಾಗಿತ್ತು. ಈ ಸಂಬಂಧ ಸಭೆಯಲ್ಲಿ ಮಂಡಿಸಿದೆ.

ಕಾಲೇಜು ನಿರೀಕ್ಷಣಾ ತಂಡಗಳು

**ತಂಡ–1**

1. ವಿದ್ವಾನ್ ಜಿ.ಎಲ್.ಭಟ್ ಅಧ್ಯಕ್ಷರು,
2. ಡಾ. ಬಿ.ವಿ.ವೆಂಕಟರಮಣ
3. ಡಾ.ವಿನಯ.ಪಿ,
4. ಡಾ.ಬಿ.ಗೋವಿಂದ,
5. ವಿದ್ವಾನ್ ತಿಮ್ಮಣ್ಣ,
6. ವಿದುಷೀ ಶಕುಂತಲಾ ಭಟ್

**ತಂಡ–2**

1. ವಿದ್ವಾನ್ ಶ್ರೀನಿವಾಸ ಮೂರ್ತಿ, ಅಧ್ಯಕ್ಷರು
2. ಡಾ. ರೇಖಾದೇವಿ ಎಸ್ ಎಚ್
3. ವಿದ್ವಾನ್ ಭಾಸ್ಕರ್‌ಭಟ್ ಜೋಷಿ
4. ಡಾ. ಶರಶ್ಚಂದ್ರ ಸ್ವಾಮಿ
5. ವಿದ್ವಾನ್ ರಾಜಶೇಖರ ಕೆ ಕೆ
6. ವಿದ್ವಾನ್ ನಾರಾಯಣ ಸ್ವಾಮಿ

**ತಂಡ–3**

1. ಡಾ ಬಿ.ಎಸ್.ಮಹದೇವಯ್ಯ, ಅಧ್ಯಕ್ಷರು
2. ಡಾ ವಿನಾಯಕ ನಾಮಣ್ಣನವರ,
3. ಡಾ ಕೃಷ್ಣ ವಿ ಜೋಷಿ,

**ತಂಡ–4**

1. ಬಿ.ಎಲ್.ನಡೋಣಿ, ಅಧ್ಯಕ್ಷರು
2. ವಿದ್ವಾನ್ ಋಷಿದೇವ್‌ಭಾರ್ಗವ್,
3. ಡಾ.ಮಂಜುನಾಥ್ ಭಟ್,

4. ಡಾ ಸಂತೋಷ ಸು ಹಾನಗಲ್ಲ,
5. ವಿದ್ವಾನ್.ಉದಯನ ಹೆಗಡೆ,
6. ವಿದುಷೀ ಜ್ಯೋತಿ ಎಚ್.ಪಿ.

4. ವಿದ್ವಾನ್ ರಾಘವ ಕೆ ಎಲ್,
5. ವಿದುಷೀ ಸಾವಿತ್ರಿ ಪೂಜಾರಿ,

ತಂಡ–5(ಘಟಕ)

1. ಕುಲಪತಿಗಳು(ಪ್ರಭಾರ), ಅಧ್ಯಕ್ಷರು
2. ಕುಲಸಚಿವರು,
3. ಡಾ.ಪದ್ಮಾ ಶೇಖರ್,
4. ಡಾ.ವಿ. ಗಿರೀಶ್‌ಚಂದ್ರ,
5. ಡಾ.ವಿ.ಎನ್. ಪಾಂಡುರಂಗಿ,
6. ವಿದುಷೀ ತೇಜಸ್ವಿನಿ.

ತಂಡ–6 (ಘಟಕ)

1. ಡಾ. ವನಿತಾ ರಾಮಸ್ವಾಮಿ, ಅಧ್ಯಕ್ಷರು
2. ವಿದುಷೀ.ಅನುಪಮಾ ಬಿ
3. ವಿದ್ವಾನ್ ಪರಿತೋಷ್ ದಾಸ್
4. ವಿದುಷೀ ಶೃತಿ.

ನಿರೀಕ್ಷಣಾ ತಂಡವು ಗಮನಿಸಬೇಕಾದ ಅಂಶಗಳು:

1. ದಾಖಲೆಗಳ ಪರಿಶೀಲನೆ,
2. ವಿದ್ಯಾರ್ಥಿಗಳ ಭೌತಿಕ ಮೌಲ್ಯಮಾಪನ/ಹಾಜರಾತಿ/ಗುಣಮಟ್ಟ;
3. ಅಧ್ಯಾಪಕರ ಗುಣಮಟ್ಟ ಪರೀಕ್ಷೆ,
4. ವಿದ್ಯಾರ್ಥಿವೇತನ ಪಟ್ಟಿ/ರಶೀದಿಗಳ ಪರಿಶೀಲನೆ,
5. Affiliation fee.

ನಿರ್ಣಯ: ನಿರೀಕ್ಷಣಾ ಸಮಿತಿಯನ್ನು ಸಭೆಯು ಅನುಮೋದಿಸಿತು. ಡಿಸೆಂಬರ್ 14 ಒಳಗಾಗಿ ನಿರೀಕ್ಷಣಾಕಾರ್ಯ ಮಾಡುವಂತೆ ನಿರೀಕ್ಷಣಾ ನೀತಿ ನಿಯಮಗಳನ್ನು ನಿರ್ಧರಿಸಲು ಕೆಳಕಂಡ ಉಪಸಮಿತಿಯನ್ನು ರಚಿಸಿ ಒಂದು ತಿಂಗಳ ಒಳಗೆ ಪರಿಶೀಲನೆಯನ್ನು ನಡೆಸಿ ವರದಿಯನ್ನು ಸಲ್ಲಿಸಲು ಸೂಚಿಸಲಾಯಿತು.

ಉಪಸಮಿತಿಯು ಹೀಗಿದೆ :

1. ನಿರ್ದೇಶಕರು, ಅಧ್ಯಯನಾಂಗ
2. ವಿದ್ವಾನ್ ಶ್ರೀನಿವಾಸಮೂರ್ತಿ
3. ವಿದ್ವಾನ್ ಚಂದ್ರಶೇಖರಯ್ಯ

ವಿಷಯ 27: ಪರೀಕ್ಷಾ ಸುಧಾರಣೆಗಳು.

ಟಿಪ್ಪಣಿ: ವೇದ–ವಾಚಾ ಪರೀಕ್ಷೆಗಳನ್ನು ಪ್ರತಿ ವಿದ್ಯಾರ್ಥಿಗಾಗಿ ಕನಿಷ್ಠ ಅರ್ಧಘಂಟೆ ಪ್ರತಿಪತ್ರಿಕೆಯಂತೆ ಪರೀಕ್ಷೆಯನ್ನು ನಡೆಸುವುದು.

ಈ ವರ್ಷದ ವಿದ್ವದುತ್ತಮಾ ಪರೀಕ್ಷೆಗಳನ್ನು ಬೆಂಗಳೂರು, ಮೈಸೂರು ಹಾಗೂ ಉಡುಪಿ ಈ ಮೂರು ಕೇಂದ್ರಗಳಲ್ಲಿ ನಡೆಸವುದು.

ನಿರ್ಣಯ: ವೇದ–ವಾಚಾ ಪರೀಕ್ಷೆಗಳನ್ನು ಪ್ರತಿ ವಿದ್ಯಾರ್ಥಿಗಾಗಿ ಕನಿಷ್ಠ ಅರ್ಧಘಂಟೆ ಪ್ರತಿಪತ್ರಿಕೆಯಂತೆ ಪರೀಕ್ಷೆಯನ್ನು ನಡೆಸಬೇಕೆಂದು ನಿರ್ಣಯಿಸಲಾಯಿತು.

ಈ ವರ್ಷದ ಶಾಸ್ತ್ರ ಹಾಗೂ ವೇದ ವಿದ್ವದುತ್ತಮಾ ಪರೀಕ್ಷೆಗಳನ್ನು ಬೆಂಗಳೂರು, ಮೈಸೂರು ಹಾಗೂ ಉಡುಪಿ ಈ ಮೂರು ಕೇಂದ್ರಗಳಲ್ಲಿ ನಡೆಸಬೇಕೆಂದು ನಿರ್ಣಯಿಸಲಾಯಿತು. ಬಿ.ಎ ಹಾಗೂ ಇತರ ಪರೀಕ್ಷೆಗಳು ಹಿಂದಿನ ವರ್ಷದಂತೆ ಆಯಾ ಪರೀಕ್ಷಾ ಕೇಂದ್ರಗಳಲ್ಲಿಯೇ ನಡೆಸುವುದಾಗಿ ನಿರ್ಣಯಿಸಲಾಯಿತು. ಹಾಗೆಯೇ, ಪ್ರತಿಯೊಬ್ಬ ವಿದ್ಯಾರ್ಥಿಯ

ಛಾಯಾಚಿತ್ರದೊಂದಿಗೆ ಆವೇದನಾಪತ್ರವನ್ನು ದಾಖಲೆಗಳ ಸಮೇತ ದೃಢೀಕರಿಸಿ ನೀಡಲು ಪ್ರಾಚಾರ್ಯರಿಗೆ ಸೂಚಿಸಲು ನಿರ್ಣಯಿಸಲಾಯಿತು.

## ಅಧ್ಯಕ್ಷರ ಅಪ್ಪಣೆಯ ಮೇರೆಗೆ

ವಿಷಯ 1: ಅ. ಘಟಕ ಕಾಲೇಜುಗಳ ರಿಕ್ತಸ್ಥಾನಗಳಲ್ಲಿ ಗೌರವ-ಉಪನ್ಯಾಸಕರ ನಿಯುಕ್ತಿ.

ಆ. ಗಂಭೀರ ಗ್ರಂಥಗಳ ದೃಶ್ಯ-ಶ್ರಾವ್ಯ ಸಾಂದ್ರಮುದ್ರಿಕೆಯ ತಯಾರಿಕೆ.

ಇ. ವಿಶ್ವವಿದ್ಯಾಲಯದ ರಜೆ ದಿನಗಳ ಪಟ್ಟಿ. (ಸಂಲಗ್ನ)

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಎಲ್ಲಾ ಕಾಲೇಜುಗಳಲ್ಲಿ ಕಾಲೇಜುಗಳ ಪರಿಶೀಲನಾ ಸಮಿತಿಯ ರಚನೆ, ಪರೀಕ್ಷಾ ಸುಧಾರಣೆಗಳು, ರಿಕ್ತಸ್ಥಾನಗಳಲ್ಲಿ ಗೌರವ ಉಪನ್ಯಾಸಕರ ನಿಯುಕ್ತಿ, ಘಟಕ ಕಾಲೇಜುಗಳಲ್ಲಿ ರಿಕ್ತಸ್ಥಾನಗಳ ನಿಯುಕ್ತಿ, ಆಡಿಯೋ-ವೀಡಿಯೋ ಸಹಿತ ಪಾಠಪ್ರವಚನಗಳು, ಹಸ್ತಪ್ರತಿಶಾಸ್ತ್ರದ ಅಧ್ಯಯನ ಈ ಅಂಶಗಳನ್ನು ಅಳವಡಿಸಬಹುದಾಗಿದೆ. ಈ ಸಂಬಂಧ ಅನುಮೋದನೆಗಾಗಿ ಸಭೆಯಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿದೆ.

ನಿರ್ಣಯ: ಘಟಕ ಕಾಲೇಜುಗಳಲ್ಲಿ ಅನೇಕ ಸ್ಥಾನಗಳು ರಿಕ್ತವಾಗಿದ್ದು, ಪಾಠಪ್ರವಚನಕ್ಕೆ ಅನುಕೂಲವಾಗುವ ದೃಷ್ಟಿಯಿಂದ ಈ ಹುದ್ದೆಗಳ ಸ್ಥಾನದಲ್ಲಿ ಗೌರವ-ಉಪನ್ಯಾಸಕರನ್ನು ಭರ್ತಿ ಮಾಡಿ, ಪಾಠಪ್ರವಚನಕ್ಕೆ ಅನುಕೂಲ ಮಾಡಿಕೊಡಲು ನಿರ್ಣಯಿಸಲಾಯಿತು. ಗೌರವ-ಉಪನ್ಯಾಸಕರನ್ನು ನೇಮಕ ಮಾಡುವಾಗ ಹಣಕಾಸಿನ ಪ್ರಾವಧಾನವನ್ನು ಗಮನಿಸಲು ಸೂಚಿಸಲಾಯಿತು.

ನಿರ್ಣಯ: ಸಂಬದ್ಧ ಹಾಗೂ ಘಟಕ ಕಾಲೇಜುಗಳಲ್ಲಿ ಅನೇಕ ಸ್ಥಾನಗಳು ರಿಕ್ತವಾಗಿರುವುದರಿಂದ ಪಾಠಪ್ರವಚನಕ್ಕೆ ಅನುಕೂಲವಾಗುವ ದೃಷ್ಟಿಯಿಂದ ಗಂಭೀರ ಗ್ರಂಥಗಳ ದೃಶ್ಯ-ಶ್ರಾವ್ಯ ಸಾಂದ್ರಮುದ್ರಿಕೆಯ ತಯಾರಿಕೆಗೆ ಅನುಮತಿಯನ್ನು ನೀಡಲಾಯಿತು.

ನಿರ್ಣಯ: ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳಿಗೆ ಶೈಕ್ಷಣಿಕ ವೇಳಾಪಟ್ಟಿಗೆ ಅನುಮೋದನೆಯನ್ನು ನೀಡಲಾಗಿದೆ.

ವಿಷಯ 2: ಬೆಳಗಾಂ-2014-15ನೇ ಸಾಲಿಗೆ ಹೊಸದಾಗಿ ಅನುಮತಿ ನೀಡಿರುವ ಶಾಲೆಗಳ ವಿವರ

ಟಿಪ್ಪಣಿ: ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವತಿಯಿಂದ ಬೆಳಗಾಂ/ಚಿತ್ರದುರ್ಗ ಜಿಲ್ಲೆಯ ಎಂಟು ಪಾಠಶಾಲೆಗಳಿಗೆ ಅನುಮತಿಯನ್ನು ನೀಡಲಾಗಿದೆ ಹಾಗು ಮೈಸೂರು ವಲಯದ ನಾಲ್ಕು ಪಾಠಶಾಲೆಗಳಿಗೆ ಮಾನ್ಯತೆಯನ್ನು ನವೀಕರಿಸಲಾಗಿದೆ ಮತ್ತು ನವೀಕರಿಸಬೇಕಾಗಿರುವ ಐದು ಪಾಠಶಾಲೆಗಳು ಅದರ ಪಟ್ಟಿಯನ್ನು ನೀಡಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

### ಬೆಳಗಾಂ-2014-15ನೇ ಸಾಲಿಗೆ ಹೊಸದಾಗಿ ಅನುಮತಿ ನೀಡಿರುವ ಶಾಲೆಗಳ ವಿವರ

| ಕ್ರ.ಸಂ | ಸಂಸ್ಥೆಯ ಹೆಸರು | ಪಾಠಶಾಲೆಯ ಹೆಸರು | ತರಗತಿಗಳು | ವಿಧಾನ |
|---|---|---|---|---|
| 1 | ಶ್ರೀ ಗಜಾನನ ವಿದ್ಯಾವರ್ಧಕ ಸಂಸ್ಥೆ (ರಿ) | ಶ್ರೀ ಗುರುಕುಲ ಸಂ.ಪಾಠಶಾಲೆ, ರೈಲು ನಿಲ್ದಾಣ, ಇಂಡಿ ತಾ॥, ವಿಜಾಪುರ | ಪ್ರಥಮಾ-1 | ಅನುದಾನ ರಹಿತ |
| 2 | ಶ್ರೀ ಸತ್ಯನಾರಾಯಣ ಮಾಧ್ವ ವಿದ್ಯಾ ಮಂದಿರ ಸಂಸ್ಥೆ (ರಿ), ಇಂಡಿ, ಶಾಂತಿನಗರ, ಸಿಂಧಗಿ ರಸ್ತೆ, ವಿಜಾಪುರ | ಶ್ರೀ ಸತ್ಯನಾರಾಯಣ ಸಂ.ಪಾಠಶಾಲೆ, ಇಂಡಿ, ಸ್ಟೇಷನ್ ರಸ್ತೆ, | ಪ್ರಥಮಾ-1 | ಅನುದಾನ ರಹಿತ |
| 3 | ಶ್ರೀ ಸದಾಶಿವೇಶ್ವರ ಜನಕಲ್ಯಾಣ ಪ್ರತಿಷ್ಠಾನ ಸಂಸ್ಥೆ (ರಿ) ದೇವರ ಹಿಪ್ಪರಗಿ, ಸಿಂಧಗಿ ತಾ॥ ವಿಜಾಪುರ ಜಿಲ್ಲೆ | ಶ್ರೀ ಕುಮಾರೇಶ್ವರ ಸಂಸ್ಕೃತ/ವೇದ ಪಾಠಶಾಲೆ, ದೇವರ ಹಿಪ್ಪರಗಿ,ಸಿಂದಗಿ ತಾ॥ ವಿಜಾಪುರ ಜಿಲ್ಲೆ | ಪ್ರಥಮಾ-1 ವೇದ-1 | ಅನುದಾನ ರಹಿತ |
| 4 | ಶ್ರೀ ಗುರುಪಾದೇಶ್ವರ ಬೃಹನ್ಮಠ ಜನಕಲ್ಯಾಣ ಪ್ರತಿಷ್ಠಾನ (ರಿ) ಓಬಲೇಶ್ವರ ತಾ॥, | ಶ್ರೀ ಗುರುಪಾದೇಶ್ವರ ಸಂ.ಪಾಠಶಾಲೆ, ಓಬಲೇಶ್ವರ ತಾ॥, | ಪ್ರಥಮಾ-1 ಕಾವ್ಯ-1 | ಅನುದಾನ ರಹಿತ |

| | | | | |
|---|---|---|---|---|
| | ವಿಜಾಪುರ ಜಿಲ್ಲೆ | ವಿಜಾಪುರ ಜಿಲ್ಲೆ | ವೀರ.ವೇದ–1 | |
| 5 | ಶ್ರೀ ಸದ್ಗುರು ತ್ರಿಮೂರ್ತಿ ವಿದ್ಯಾವರ್ಧಕ ಸಂಘ(ರಿ), ಗೋಳಸಾರ, ಇಂಡಿ ತಾ॥, ವಿಜಾಪುರ ಜಿಲ್ಲೆ॥ | ಶ್ರೀ ಗಾಯತ್ರಿ ಸಂ.ಪಾಠಶಾಲೆ, ಗೋಳಸಾರ | ಪ್ರಥಮಾ–1 | ಅನುದಾನ ರಹಿತ |
| 6 | ಶ್ರೀ ಸಂಗಮೇಶ್ವರ ವಿದ್ಯಾವರ್ಧಕ ಸಂಘ(ರಿ), ವಾಡವಾಗಿ, ಬಿ.ಬಾಗೇವಾಡಿ ತಾ॥ ವಿಜಾಪುರ ಜಿ॥ | ವಿಶ್ವಮಾನ್ಯ ಪೂಜ್ಯಾಭಿನವ ಸಂ. ವೇ. ಪಾಠಶಾಲೆ, ಬಿ.ಬಾಗೇವಾಡಿ, ಬಿಜಾಪುರ ಜಿಲ್ಲೆ॥ | ಪ್ರಥಮಾ–1 ವೀರಶೈವ ವೇದ ಪ್ರಥಮಾ–1 | ಅನುದಾನ ರಹಿತ |
| 7 | ಶ್ರೀ ಜಗದಾರಾಧ್ಯ ಜಯಶಾಂತಲಿಂಗೇಶ್ವರ ಶಿಕ್ಷಣ ಸಂಸ್ಥೆ(ರಿ), ಜಾಲಹಳ್ಳಿ, ದೇವದುರ್ಗ ತಾ॥, ರಾಯಚೂರು ಜಿ॥ | ಅ) ಶ್ರೀ ದೇವಮಾನ್ಯ ಯೋಗಾಭಿನವ ಸಂ.ಪಾಠಶಾಲೆ, ಕಲಕೇರಿ, ಸಿಂಧಗಿ, ಬಿಜಾಪುರ ಜಿಲ್ಲೆ॥<br>ಆ) ಶ್ರೀ ಅಣೆಮಲ್ಲೇಶ್ವರ ಸಂ. ವೀರಶೈವ ವೇದ ಪಾಠಶಾಲೆ, ಬೆಣಕಲ್, ದೇವದುರ್ಗ ತಾ॥<br>ಇ) ಶ್ರೀ ವಿದ್ಯಾಮಾನ್ಯ ಶಿವಾಭಿನವ ಸಂಸ್ಕೃತ ವೇದ ಪಾಠಶಾಲೆ, ದೇವದುರ್ಗ ತಾ॥, ರಾಯಚೂರು ಜಿಲ್ಲೆ॥ | ಪ್ರಥಮಾ–1 | ಅನುದಾನ ರಹಿತ |
| 8 | ಶ್ರೀ ಜಗದ್ಗುರು ಪಂಡಿತಾರಾಧ್ಯ ಗುರುಕುಲ ವೇದ ಪಾಠಶಾಲೆ | ವೀರಾಪುರಮಠ, ಸಾಗರ ತಾ॥, ಶಿವಮೊಗ್ಗ ಜಿಲ್ಲೆ॥ | ವೀರಶೈವವೇದ | ಅನುದಾನ ರಹಿತ |

**ಮೈಸೂರು/ಚಿತ್ರದುರ್ಗ–2013–14ನೇ ಸಾಲಿಗೆ ಮಾನ್ಯತೆ ನವೀಕರಿಸಲಾಗಿರುವ ಶಾಲೆಗಳ ವಿವರ**

| ಕ್ರಸಂ | ಪಾಠಶಾಲೆಯ ಹೆಸರು | ಸ್ಥಳ | ತರಗತಿಗಳು | ವಿಧಾನ |
|---|---|---|---|---|
| 1 | ಶ್ರೀ ಮಹದೇಶ್ವರ ಸಂಸ್ಕೃತ ಪಾಠಶಾಲೆ,ಜಿ.ಕೆ.ಹೊಸೂರು, ಕೊಳ್ಳೇಗಾಲ ತಾ॥ ಚಾಮರಾಜನಗರ ಜಿ॥ | ಜಿ.ಕೆ.ಹೊಸೂರು, ಕೊಳ್ಳೇಗಾಲ ತಾ॥ ಚಾಮರಾಜನಗರ ಜಿ॥ | ಸಂಸ್ಕೃತ ಪ್ರಥಮಾ–1,2,3 | ಅನುದಾನ ರಹಿತ |
| 2 | ಶ್ರೀ ಕಾವೇರಿ ಕನ್ಯಾ ಗುರುಕುಲ, | ಬೊಮ್ಮೂರು ಅಗ್ರಹಾರಹಳ್ಳಿ,ಶ್ರೀ ರಂಗಪಟ್ಟಣ ತಾ॥ ಮಂಡ್ಯ ಜಿ॥ | ಸಾಹಿತ್ಯ–1 | ಅನುದಾನ ರಹಿತ |
| 3 | ಶ್ರೀ ಮುರುಘರಾಜೇಂದ್ರಸ್ವಾಮಿ ಸಂಸ್ಕೃತ ಪಾಠಾಲೆ | ಕಾಳನಹುಂಡಿ,ಚಾಮರಾಜನಗರ ಜಿ॥ | ಸಂಸ್ಕೃತ ಪ್ರಥಮಾ–1,2,3 | ಅನುದಾನ ರಹಿತ |
| 4 | ಶ್ರೀ ಮುರುಘರಾಜೇಂದ್ರಸ್ವಾಮಿ ಸಂಸ್ಕೃತ ಪಾಠಶಾಲೆ | ಮರಿಯಾಲ, ಚಾಮರಾಜನಗರ ಜಿ॥ | ಸಂಸ್ಕೃತ ಪ್ರಥಮಾ–1,2,3 | ಅನುದಾನ ರಹಿತ |

**ಮೈಸೂರು–2014–15ನೇ ಸಾಲಿಗೆ ಮಾನ್ಯತೆ ನವೀಕರಿಸಬೇಕಾಗಿರುವ ಶಾಲೆಗಳ ವಿವರ**

| ಕ್ರಸಂ | ಪಾಠಶಾಲೆಯ ಹೆಸರು | ಸ್ಥಳ | ಜಿಲ್ಲೆ | |
|---|---|---|---|---|
| 1 | ಮಾತೃಶ್ರೀ ಸಂಸ್ಕೃತ ಪಾಠಶಾಲೆ | ದೇವಲಾಪುರ | ಮೈಸೂರು | |
| 2 | ಮಾತೃಶ್ರೀ ಸಂಸ್ಕೃತ ಪಾಠಶಾಲೆ | ಸಿಂಧುವಳ್ಳಿ | ಮೈಸೂರು | |
| 3 | ಮಾತೃಶ್ರೀ ಸಂಸ್ಕೃತ ಪಾಠಶಾಲೆ | ದೂರ | ಮೈಸೂರು | |
| 4 | ಮಾತೃಶ್ರೀ ಸಂಸ್ಕೃತ ಪಾಠಶಾಲೆ | ಕೀಳನಪುರ | ಮೈಸೂರು | |
| 5 | ಮಾತೃಶ್ರೀ ಸಂಸ್ಕೃತ ಪಾಠಶಾಲೆ | ಹೊಮ್ಮರಗಲ್ಲಿ | ಮೈಸೂರು | |

ಮೇಲ್ಕಂಡ ಅಂಶಕ್ಕೆ ಅನುಮತಿಯನ್ನು ಕೋರಿದೆ.

**ನಿರ್ಣಯ:** **ಮೇಲ್ಕಂಡ ಪಾಠಶಾಲೆಗಳಿಗೆ ಅನುಮತಿಯನ್ನು ಹಾಗೂ ಮಾನ್ಯತೆಯನ್ನು ನೀಡಲು ಸಭೆಯು ಘಟನೋತ್ತರವಾಗಿ ಅನುಮೋದಿಸಿತು.**

**ವಿಷಯ 3:** **ಶ್ರೀಮಾತಾ ಸಂಸ್ಕೃತ ಕಾಲೇಜಿನಲ್ಲಿ ತೆರವಾಗಿರುವ ಹುದ್ದೆಯನ್ನು ಭರ್ತಿಮಾಡುವ ಬಗ್ಗೆ**

ಟಿಪ್ಪಣಿ: ಶ್ರೀ ಮಾತಾ ಸಂಸ್ಕೃತ ಕಾಲೇಜಿನಲ್ಲಿ ವ್ಯಾಕರಣ ಮತ್ತು ಅಲಂಕಾರಶಾಸ್ತ್ರಗಳ ಸಹಾಯಕ ಪ್ರಾಧ್ಯಾಪಕರ ಹಾಗು ಸಾಹಿತ್ಯ ಸಹಾಯಕರ ತಲಾ ಒಂದು ಹುದ್ದೆಯು ಖಾಲಿಯಾಗಿರುತ್ತದೆ. ಇವುಗಳನ್ನು ತುಂಬಲು ಕಾಲೇಜಿನ ವತಿಯಿಂದ ಮನವಿಯನ್ನು ಈಗಾಗಲೇ ಸಲ್ಲಿಸಿರುತ್ತಾರೆ. ಈ ಸಂಬಂಧ ಸಭೆಯಲ್ಲಿ ಅನುಮತಿಯನ್ನು ಕೋರಿದೆ

ನಿರ್ಣಯ: ಮೇಲ್ಕಂಡ ಅಂಶವು ಸರ್ಕಾರದ ಅನುದಾನಕ್ಕೆ ಒಳಪಡುವುದರಿಂದ ಆ ದಿಶೆಯಲ್ಲಿ ಪ್ರಕ್ರಿಯೆಯನ್ನು ಪ್ರಶಾಸನಸಮಿತಿಯಲ್ಲಿ ಚರ್ಚಿಸಿ ಮುಂದುವರೆಸಲು ಸೂಚಿಸಲಾಯಿತು.

Srivara

ಪ್ರೊ. ಶ್ರೀನಿವಾಸ ವರಖೇಡಿ
ಅಧ್ಯಕ್ಷರು

Shridhar M.K.

ಪ್ರೊ. ಎಂ.ಕೆ. ಶ್ರೀಧರ್
ಸದಸ್ಯ ಕಾರ್ಯದರ್ಶಿ